ANANTHKUMAR PRATISHTHANA

# ಅನಂತಪಥ


ನಾಲ್ವಡಿ ಕೃಷ್ಣರಾಜ ಒಡೆಯರ್
ಪುಟ 9 ವ್ಯಕ್ತಿ ವಿಶೇಷ ಮಾಲಿಕೆ

ಸಂಪುಟ - 4 ನವೆಂಬರ್ - 2023 ಸಂಚಿಕೆ - 41

# ಸಂಸ್ಕೃತಿ-ಪರಂಪರೆ ಅಭಿಮಾನದ 'ಅನಂತ ಸ್ಮೃತಿ ನಡಿಗೆ'

ನವೆಂಬರ್ 12, 2023. ಶ್ರೀ ಅನಂತಕುಮಾರರ ಪುಣ್ಯತಿಥಿಯನ್ನು ಭಾರತೀಯ ಸಂಸ್ಕೃತಿ-ಪರಂಪರೆಯನ್ನು ಉಳಿಸಿ ಬೆಳೆಸುವ ದಿನವನ್ನಾಗಿ ಸಾಂಕೇತಿಕವಾಗಿ ಆಚರಿಸುವ ಉದ್ದೇಶದಿಂದ ಅದಮ್ಯ ಚೇತನ ಸಂಸ್ಥೆಯು ಅಂದು ಸಂಜೆ 5 ಗಂಟೆಗೆ 'ಅನಂತ ಸ್ಮೃತಿ ನಡಿಗೆ'ಯನ್ನು ಆಯೋಜಿಸಿತ್ತು. ಲಾಲ್ ಬಾಗ್ ಪಶ್ಚಿಮ ದ್ವಾರದಿಂದ ಆರಂಭವಾದ ಮೆರವಣಿಗೆಯಲ್ಲಿ ಪಂಜುಗಳನ್ನು ಹಿಡಿದು ನೂರಾರು ಅಭಿಮಾನಿ ಕಾರ್ಯಕರ್ತರೂ ಮುಖಂಡರೂ ಗವಿಪುರದ ಅದಮ್ಯ ಚೇತನ ಸಂಸ್ಥೆಯವರೆಗೂ ನಡೆದರು.



ಶ್ರೀ ಅನಂತಕುಮಾರರು ಭಾರತೀಯ ಸಂಸ್ಕೃತಿ-ಪರಂಪರೆ ಉಳಿಸಿ ಬೆಳೆಸುವತ್ತ ಅದಮ್ಯ ಉತ್ಸಾಹ - ಅಭಿಮಾನ ಹೊಂದಿದ್ದರು. ಈ ಅಭಿಮಾನವೇ ಅವರ ರಾಷ್ಟ್ರೀಯತೆಯ ಪರಿಕಲ್ಪನೆಯೂ ಆಗಿತ್ತು. ಅನಂತಕುಮಾರರ ಪುಣ್ಯತಿಥಿಯ ದಿನವನ್ನು ಭಾರತೀಯ ಸಂಸ್ಕೃತಿ ಹಾಗೂ ಪರಂಪರೆ ಉಳಿಸಿ ಬೆಳೆಸುವ ದೇಶಾಭಿಮಾನದ ಸಂಕೇತವಾಗಿ ಆಚರಿಸಲಾಗುತ್ತಿರುವ 'ಅನಂತ ಸ್ಮೃತಿ ನಡಿಗೆ'ಯಲ್ಲಿ ಪಾಲ್ಗೊಳ್ಳುವುದು ತಮ್ಮ ಕರ್ತವ್ಯ ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಮೂಡಿತ್ತು.

ಪಂಜಿನ ಮೆರವಣಿಗೆಯು ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ಗಾಂಧಿಬಜಾರ್, ರಾಮಕೃಷ್ಣ ಆಶ್ರಮ, ಗವಿಪುರದ ಕೆಂಪೇಗೌಡ ವೃತ್ತ, ನಂತರ ಅದಮ್ಯ ಚೇತನ ಸಂಸ್ಥೆಯವರೆಗೂ ನಡೆಯಿತು. ಕೆಂಪೇಗೌಡ ವೃತ್ತದ ಬಳಿ, ಪಂಜಿನ ಮೆರವಣಿಗೆಯ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ, ಶ್ರೀ ಬಿ.ವೈ. ವಿಜಯೇಂದ್ರ, ರಾಜ್ಯದಲ್ಲಿ ಬಿಜೆಪಿಯ ಸದೃಢತೆಗೆ ಅನಂತಕುಮಾರರ ಶ್ರಮ-ಕೊಡುಗೆ ಅಪಾರವಾಗಿದೆ. ಪಕ್ಷದಲ್ಲಿ ಹಾಗೂ ಕೇಂದ್ರಸರ್ಕಾರದಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ವಹಿಸಿದ್ದರೂ ಅವರ ಜೀವನ ಶೈಲಿ ಸರಳವಾಗಿತ್ತು, ಅವರ ಚಿಂತನೆಗಳು ಉನ್ನತವಾಗಿದ್ದವು ಎಂದು ಬಣ್ಣಿಸಿದರು.

ಅದಮ್ಯ ಚೇತನ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಮಾತನಾಡಿ, ಅನಂತಕುಮಾರರಂತೆಯೇ ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಗಳನ್ನು ಗೌರವಿಸುವುದೇ ನಮ್ಮ ಕರ್ತವ್ಯ. ಇದರಿಂದ ಅವರ ಪುಣ್ಯದಿನದ ಆಚರಣೆಯು ಅರ್ಥಪೂರ್ಣವಾಗುತ್ತದೆ ಎಂದರು. ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಆರ್. ಅಶೋಕ, ಸಿ.ಕೆ. ರಾಮಮೂರ್ತಿ ರವಿಸುಬ್ರಮಣ್ಯಂ, ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

# ಅನಂತ ಕನ್ನಡ ಪ್ರೇಮ



ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿಸುವಲ್ಲಿ ಅನಂತಕುಮಾರರ ಪ್ರಯತ್ನ ಗಮನಾರ್ಹ. ವಿಧಾನಸಭಾ ಕ್ಷೇತ್ರ ಮಟ್ಟದಲ್ಲೂ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಉತ್ತೇಜಿಸುತ್ತಿದ್ದ ಅನಂತಕುಮಾರರು ನೈಜ ಅರ್ಥದಲ್ಲಿ ಮುತ್ಸದ್ದಿ. ಸಮಾಜದ ಒಳಿತಿಗಾಗಿ ಆಶಿಸುವ ದೂರಾಲೋಚಕ. ಎಲ್ಲಕ್ಕಿಂತ ಹೆಚ್ಚಾಗಿ ಭಾರತೀಯತೆ ಮೈಗೂಡಿಸಿಕೊಂಡ ಧೀಮಂತ. ಕನ್ನಡ ಸಂಸ್ಕೃತಿಯ ಪ್ರೇಮಿ. ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಪಾರ ಕಾಳಜಿ ಉಳ್ಳವರು. ಈ ನಿಟ್ಟಿನಲ್ಲಿ, ಭಾರತೀಯ ಸಂಸ್ಕೃತಿಯ ಪ್ರತೀಕಗಳಾದ ದೇವಾಲಯ, ಸಮುದಾಯ ಭವನ, ಭಜನಾ ಮಂದಿರ, ವಾಚನಾಲಯ, ಗ್ರಂಥಾಲಯಗಳ ನಿರ್ಮಾಣಕ್ಕೆ ಅನಂತಕುಮಾರರು ಸಂಸದರ ನಿಧಿಯಿಂದ ಸಾಧ್ಯವಿದ್ದ ಧನಸಹಾಯ ನೀಡುತ್ತಿದ್ದರು.

ತಂತ್ರಜ್ಞಾನದಲ್ಲಿ ಕನ್ನಡದ ಬಳಕೆಯನ್ನು ಸರಳಗೊಳಿಸುವ ಕನ್ನಡ ಯುನಿಕೋಡ್ ನಿರ್ಮಾಣ -ವನ್ನು ಅನಂತಕುಮಾರ್ ಪ್ರೋತ್ಸಾಹಿಸಿದ್ದರು. ಸಮುದಾಯ ಸಮಾರಂಭಗಳಲ್ಲಿ ಸ್ಪರ್ಧೆ, ಉತ್ಸವಗಳ ಮೂಲಕ ಶುದ್ಧಕನ್ನಡದಲ್ಲಿ ನಿರರ್ಗಳವಾಗಿ ಮಾತನಾಡಲು ಜನರನ್ನು ಉತ್ತೇಜಿಸುತ್ತಿದ್ದರು. ಅವರು ಸದಾ ಕನ್ನಡದಲ್ಲೇ ಸಹಿ ಮಾಡುತ್ತಿದ್ದರು. ಆರು ಬಾರಿ ಲೋಕಸಭಾ (1996-2018) ಸದಸ್ಯರಾಗಿ ಆಯ್ಕೆಯಾದ ಅನಂತಕುಮಾರರು ಪ್ರತಿಸಲವೂ ಕನ್ನಡದಲ್ಲಿಯೇ ಪ್ರಮಾಣವಚನ ಸ್ವೀಕರಿಸಿದ್ದರು. 2012 ರ ವಿಶ್ವಸಂಸ್ಥೆಯ ಮಹಾ ಅಧಿವೇಶನವನ್ನು ಉದ್ದೇಶಿಸಿ ಅವರು ಕನ್ನಡದಲ್ಲೇ ಭಾಷಣ ಮಾಡಿದ್ದರು.

''ವಿಶ್ವಕ್ಕೆ ಮೊಟ್ಟಮೊದಲು ಪ್ರಜಾಪ್ರಭುತ್ವದ ಕಲ್ಪನೆ ನೀಡಿದ್ದು ಬ್ರಿಟನ್ ಅಲ್ಲ; ಈ ಪರಿಕಲ್ಪನೆಯನ್ನು ಜಾರಿಗೆ ತಂದವರು ಭಾರತದವರು; ವಿಶೇಷವಾಗಿ ಕರ್ನಾಟಕದವರು; ಅವರೇ ನಮ್ಮ ಬಸವಣ್ಣನವರು'' ಎಂದು ಪ್ರತಿಪಾದಿಸಿದರು. ವಿದೇಶಗಳಲ್ಲೂ ಕನ್ನಡ ನೆಲ-ಸಂಸ್ಕೃತಿಯ ಡಿಂಡಿಮವನ್ನು ಬಾರಿಸಿ, ವಿಶ್ವಮಟ್ಟದಲ್ಲಿ ಕನ್ನಡದ ಕಂಪನ್ನು ಹರಡಿದರು.

ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯೆಯೂ ತಪ್ಪದೆ ಕನ್ನಡ ನಾಡು, ಭಾಷೆ, ಸಂಸ್ಕೃತಿ ಕುರಿತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಬೆಂಗಳೂರು ಕರಗ, ಬಸವನಗುಡಿಯ ಕಡಲೆಕಾಯಿ ಪರಿಷೆ, ಶಿವರಾತ್ರಿ, ಸಾರಕ್ಕಿ ಪುಷ್ಪೋತ್ಸವ, ದೀಪೋತ್ಸವ, ಗವಿಗಂಗಾಧರೇಶ್ವರ ಸ್ವಾಮಿ ದೇವಸ್ಥಾನ ಇತ್ಯಾದಿ ಉತ್ಸವಗಳಲ್ಲಿ ಭಾಗವಹಿಸುತ್ತಿದ್ದರು. ಪುಟ 4 ರಲ್ಲಿ ಮುಂದುವರಿದಿದೆ





# "ಅನಂತ ಚೇತನ" ಜ್ಞಾನ ಪ್ರಶಿಕ್ಷಣ ಕೇಂದ್ರ ಪ್ರಾರಂಭ




ಅನಂತಕುಮಾರ್ ಪ್ರತಿಷ್ಠಾನದ ಆಶ್ರಯದಲ್ಲಿ ಭಾರತೀಯ ಜ್ಞಾನ ಪ್ರಶಿಕ್ಷಣ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಬೆಂಗಳೂರಿನ ಜಯನಗರದಲ್ಲಿ "ಅನಂತ ಚೇತನ" ಎಂಬ ಹೆಸರಿನ ಕೇಂದ್ರವನ್ನು ಈಚೆಗೆ ಉದ್ಘಾಟಿಸಲಾಯಿತು. ಈ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಖ್ಯಾತ ಇತಿಹಾಸ ತಜ್ಞ ಡಾ. ದೇವರಕೊಂಡಾರೆಡ್ಡಿಯವರು, "ಎರಡು ಸಾವಿರ ವರ್ಷಗಳಿಂದ ದೇಶವು ಹಲವಾರು ಪ್ರಾಕೃತಿಕ ವಿಕೋಪಗಳನ್ನು ಎದುರಿಸಿದರೂ ಇಂದಿಗೂ ಕುಗ್ಗದೆ ಕೊಂಕದೆ ತಲೆಯೆತ್ತಿ ನಿಂತಿರುವ ದೇವಾಲಯಗಳ ನಿರ್ಮಾಣ, ಸಾಮಾಜಿಕ ಮಹತ್ವ ಮುಂತಾದ ವಿಷಯಗಳ ಪಾರಂಪರಿಕ ಜ್ಞಾನ ನಮಗೆ ಅಚ್ಚರಿ ಮೂಡಿಸುತ್ತದೆ. ಅಂದಿನ ಕಾಲದ ವಡ್ಡನಿಗಿರುವ ಜ್ಞಾನ ಇಂದಿನ ಕಾಲದ ವಿಶ್ವವಿದ್ಯಾನಿಲಯಗಳಲ್ಲಿ ಓದಿದ ತಂತ್ರಜ್ಞರಲ್ಲಿಯೂ ಇಲ್ಲವೆನ್ನಬಹುದು. ಪಾರಂಪರಿಕ ಜ್ಞಾನ ಕಡಿಮೆಯಾದಾಗ ಸಾಮಾನ್ಯಜ್ಞಾನದ ಕೊರತೆಯುಂಟಾಗುತ್ತದೆ. ದೇವಾಲಯಗಳು ಪೂಜಾ ಕೇಂದ್ರಗಳಾಗಿರದೆ, ಲೇವಾದೇವಿ ನಡೆಸುವ ಸ್ಥಳದಂತೆ, ಅತಿಥಿ ಅಭ್ಯಾಗತರ ಸತ್ಕಾರ ಕೇಂದ್ರದಂತೆ, ಶಿಕ್ಷಣ ಕೇಂದ್ರದಂತೆ ಸ್ಥಾನಮಾನಗಳನ್ನು ಗಳಿಸಿದ್ದವು.

ಸಾ.ಶ. ೧೩೩೬ರ ಹೊತ್ತಿಗೆ ಮುಸ್ಲಿಮರ ದಾಳಿಯ ಕಾರಣದಿಂದ ಒಂದು ರಾಜವಂಶವೂ ಉಳಿದುಕೊಳ್ಳಲಿಲ್ಲ. ಅನೇಕ ದೇವಾಲಯಗಳು ಹಾನಿಗೀಡಾದವು. ಹೀಗಿದ್ದೂ ಇಷ್ಟರ ಮಟ್ಟಿಗೆ ದೇವಾಲಯಗಳ ಉಳಿವಿಗೆ ಅವುಗಳ ನಿರ್ಮಾಣಕ್ಕೆ ಬಳಸಿದ ಉನ್ನತ ತಂತ್ರಜ್ಞಾನವೇ ಕಾರಣ. ಈ ಕುರಿತು ಹೆಚ್ಚಿನ ಅಧ್ಯಯನ ಮಾಡಿ ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚಿನ ಅಧ್ಯಯನಕ್ಕೆ ಪ್ರೇರಣೆ ನೀಡುವುದು ಮತ್ತು ಹೆಚ್ಚಿನ ಸಂಶೋಧನೆಗಳಿಗೆ ಸಹಾಯ ನೀಡುವುದು ಅನಂತಚೇತನ ಕಾರ್ಯಕ್ರಮದ ಉದ್ದೇಶ" ಎಂದು ಹೇಳಿದರು.

ಹಿರಿಯ ಲೇಖಕಿ, ಸಂಸ್ಕೃತ ಪ್ರಾಧ್ಯಾಪಕಿ, ಡಾ. ಎಸ್. ಆರ್. ಲೀಲಾ ಭಾಷಣ ಮಾಡಿ, "ದೇವಾಲಯಗಳ ಮೂಲಕ ಭಾರತೀಯ ಜ್ಞಾನ ಪದ್ಧತಿಯ ಪರಿಚಯ ದೊರೆಯುತ್ತದೆ. ದೇವಾಲಯಗಳಲ್ಲಿ ಸಂಗೀತ, ಕಲೆ, ನಾಟ್ಯಶಾಸ್ತ್ರ, ರಾಮಾಯಣ ಮಹಾಭಾರತ ಭಾಗವತ ಮುಂತಾದ ವಾಙ್ಮಯಗಳ ಬಗ್ಗೆಯೂ ವಿವರಗಳು ದೊರೆಯುತ್ತವೆ. ದೇವಾಲಯಗಳನ್ನು ಸಂಸ್ಕೃತಿ ಮತ್ತು ವಾಣಿಜ್ಯ ಚಟುವಟಿಕೆಗಳ ಕೇಂದ್ರ ಅಥವಾ ಸಂಕೀರ್ಣ ಎಂದು ಕರೆಯಬಹುದು. ಆದರೆ ಈ ವಿಸ್ತೃತವಾದ ದೇವಾಲಯ ಸಂಸ್ಕೃತಿಯನ್ನು ನಾವು ಶೈಕ್ಷಣಿಕ ಚೌಕಟ್ಟಿನಲ್ಲಿ ಅಧ್ಯಯನ ಮಾಡುತ್ತಿಲ್ಲ. ಖಾಸಗಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ನಡೆದಿದ್ದರೂ ಅದು ಸಮಾನಾಂತರವಾಗಿಯೇ ಉಳಿದಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಈ ಕುರಿತು ಸಾಕಷ್ಟು ಪೂರ್ವಾಗ್ರಹಗಳನ್ನು ನೋಡಬಹುದು. ಭಾರತವನ್ನು ಉಳಿಸಿದ ಮಹಾನ್ ಶಕ್ತಿಯಾದ ಭಾರತೀಯ ಜ್ಞಾನಪದ್ಧತಿಯಲ್ಲಿ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಅನಂತಚೇತನ ಕೇಂದ್ರವು ಪ್ರಾರಂಭವಾಗಿರುವುದು ಸ್ವಾಗತಾರ್ಹ" ಎಂದು ಹೇಳಿದರು.

೩೦/೧೦/೨೦೨೩ರಂದು ಬೆಂಗಳೂರಿನಲ್ಲಿ ಪ್ರಾರಂಭವಾದ ಈ ಕೇಂದ್ರವನ್ನು ದೀಪ ಬೆಳಗುವುದರ ಮೂಲಕ ಅತಿಥಿಗಳು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಪ್ರತಿಷ್ಠಾನದ ಅಧ್ಯಕ್ಷ, ಪ್ರೊ. ಪಿ. ವಿ. ಕೃಷ್ಣಭಟ್ಟರು "ಒಂದು ಪ್ರದೇಶದ ಮೇಲೆ ಆಕ್ರಮಣ ನಡೆದಾಗ ಮೊತ್ತಮೊದಲು ಬಲಿಯಾಗುವುದು ಇತಿಹಾಸ, ಆಕ್ರಮಣಕಾರರ ಇತಿಹಾಸವನ್ನು ಬಿಂಬಿಸುವ ಇತಿಹಾಸವೇ ರಚನೆಯಾಗುತ್ತದೆ. ನಮ್ಮ ದೇಶದ ಇತಿಹಾಸವೂ ಇದೇ ಪರಿಸ್ಥಿತಿಯನ್ನು ಎದುರಿಸುತ್ತಿದೆ" ಎಂದು ಅಭಿಪ್ರಾಯಪಟ್ಟರು.

ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ "ಯಾವುದೇ ಶಿಕ್ಷಣವು ಆಯಾ ನೆಲದ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಬೇರೂರಿರುತ್ತದೆ. ಭಾರತೀಯ ಪರಂಪರೆ-ಸಂಸ್ಕೃತಿ ಆಧರಿತ ಶಿಕ್ಷಣದಿಂದಲೇ ಇಡೀ ದೇಶದ ವಿಕಾಸ-ಪ್ರಗತಿ ಸಾಧ್ಯ" ಎಂದು ಹೇಳಿದರು.

'ಅನಂತ ಚೇತನ'ದ ಪ್ರಧಾನ ಸಂಚಾಲಕ ಟಿ.ಎಸ್. ಗೋಪಾಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಕೇಂದ್ರದ ಉದ್ದೇಶದ ಸಾಕಾರಕ್ಕಾಗಿ ಅನಂತಕುಮಾರ್ ಪ್ರತಿಷ್ಠಾನವು, ಭಾರತೀಯ, ಅದರಲ್ಲೂ ವಿಶೇಷವಾಗಿ ಕರ್ನಾಟಕದ ಇತಿಹಾಸ, ಧಾರ್ಮಿಕ, ಸಂಸ್ಕೃತಿ, ಶಿಕ್ಷಣದ ಪುರಾತನ ಮೌಲ್ಯಗಳ ಅಧ್ಯಯನ, ಸಂಶೋಧನೆ, ಪಠ್ಯ ರೂಪಿಸುವಿಕೆ ಹಾಗೂ ಅವುಗಳ ಆನ್ವಯಿಕತೆಯ ಕುರಿತು ಪರಿಣತರಿಂದ ಉಪನ್ಯಾಸಗಳನ್ನು ಮಾಡಿಸಿ, ಅವುಗಳ ಆಡಿಯೋ-ವಿಡಿಯೋ ಚಿತ್ರೀಕರಣ ಮಾಡುವುದು ಮಾತ್ರವಲ್ಲ, ಅವುಗಳ ಬಗ್ಗೆ ಸಮಾಜದ ಕೊನೆಯ ವ್ಯಕ್ತಿಯೂ ಅಭಿಮಾನ ಮೂಡಿಸಿಕೊಳ್ಳುವಂತೆ ಪ್ರೇರಿಸುವುದು ಈ ಕೇಂದ್ರದ ಮುಖ್ಯ ಆಶಯವಾಗಿದೆ ಎಂದು ಹೇಳಿದರು.

ಸಮಾರಂಭದಲ್ಲಿ ನೃಪತುಂಗ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಶ್ರೀನಿವಾಸ ಬಳ್ಳಿ, ಯೋಜನೆಯ ಸಂಪನ್ಮೂಲ ವ್ಯಕ್ತಿಗಳಾದ ಡಾ. ಎಂ.ಎನ್. ಪ್ರಭಾಕರ್, ಪ್ರೊ. ಕೆ.ಆರ್. ನರಸಿಂಹನ್, ಡಾ. ಮನೋಜ್, ಡಾ. ಅನುರಾಧಾ, ಡಾ. ವಸಂತಲಕ್ಷ್ಮಿ, ಪ್ರೊ. ಕೆ.ಎಸ್. ಅಪರ್ಣಾ, ಶ್ರೀ ಕೆಂಗೇರಿ ಚಕ್ರಪಾಣಿ ಮುಂತಾದವರ ಜೊತೆಗೆ ಅನೇಕ ಆಸಕ್ತರು ಭಾಗವಹಿಸಿದ್ದರು. ಶ್ರೀ ಪೂರ್ಣಪ್ರಜ್ಞ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರದೀಪ್ ಓಕ್ ಅವರು ವಂದಿಸಿದರು.





## ಅಭಿನಂದನೆಗಳು



ಬಿಜೆಪಿ ಮುಖಂಡ ಶ್ರೀ ಆರ್. ಅಶೋಕ ಅವರು ಕರ್ನಾಟಕ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುತ್ತಾರೆ. ಅವರಿಗೆ ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್ ಅಧ್ಯಾಯ- 17

# ಮಕ್ಕಳ ಅಭಯಾರಣ್ಯ

"ನಾಳೆ ಅಂವಾ ದೊಡ್ಡ ರಾಜಕಾರಣಿ ಆಗ್ತಾನ, ಅಂವ ಮಂತ್ರಿ ಆಗೋದು ಖರೆ !"

- ಎಂ.ಟಿ.ಎಸ್ ಕಾಲೊನಿಯ ಮಕ್ಬೂಲ್ ಪಟೇಲನ ತಾಯಿ ಹೇಳುತ್ತಿದ್ದ ಭವಿಷ್ಯವಾಣಿಯಿದು. ಜ್ಯೋತಿಷ್ಯವನ್ನೇನೂ ಅರಿಯದ ಆ ಗೃಹಿಣಿ ಈ ಮಾತು ಹೇಳುತ್ತಿದ್ದುದು ಅನಂತಕುಮಾರನ ಬಗೆಗೆ. ಆಕೆಗೆ ಅಂಥದೊಂದು ಗ್ರಹಿಕೆ ಮೂಡಲು ಪ್ರಬಲ ಕಾರಣವೇನೂ ಇರಲಿಕ್ಕಿಲ್ಲ. ಅನಂತಕುಮಾರ ಆಕೆಯ ಮಗ ಮಕ್ಬೂಲನ ಜೊತೆಗಾರ. ಎಂ ಟಿ ಎಸ್ ಕಾಲೊನಿಯ ಸಹವಾಸಿ. ಒಂದು ದಿನವೂ ತಪ್ಪದಂತೆ ದಿನನಿತ್ಯ ಸಂಜೆ ಆಕೆಯೆದುರು ಅಧಿಕೃತವಾಗಿಯೋ ಎಂಬಂತೆ ಅನಂತಕುಮಾರ ಕಾಣಿಸಿಕೊಳ್ಳುವನು. ಆ ಸಂದರ್ಭದಲ್ಲಿ ಮಕ್ಬೂಲನ ತಾಯಿಯ ಮಾತು ಹೀಗೆ ಸಾಗುತ್ತಿತ್ತು:

"ನಿಮ್ಗೇನು ಓದು ಬರಹ ಒಂದೂ ಇಲ್ಲೇನು, ಸಾಲಿ ಮುಗಿಸಿ ಬಂದು ಇನ್ನೂ ಮನಿಯೊಳಗ ಕಾಲಿಟ್ಟಿಲ್ಲ, ಆಗಲೇ ಕುಣೀಲಿಕ್ಕ ಹೊರಟು ನಿಂತೀರಿ. ನಿಮಗ ಎಷ್ಟು ಸಲ ಹೇಳೂದು, ಸಾಲಿ ಮುಗಿಸಿ ಬಂದು ಒಂದು ಹತ್ತು ಮಿನಿಟು ಕುಂತು ಓದೂದು ಬರಿಯೋದು ಏನದ ನೋಡ್ರಿ. ಆಮ್ಯಾಲ ಆಟ ಮತ್ತೊಂದಂತ. ನೀನಂತು ನನ್ನ ಮಾತ ಕೇಳಾಂವ ಅಲ್ಲ, ನಿನ್ನ ನೋಡಿ ಮಕ್ಬೂಲನೂ ಆಟದೊಳಗೇ ಇರ್ತಾನ."

ಆಕೆ ತಲೆಯೆತ್ತಿ ಹುಡುಗರತ್ತ ಕಣ್ಣು ಹಾಯಿಸಿದಳು. ಅವಳ ಕಣ್ಣೆದುರು ಅನಂತಕುಮಾರನೊಬ್ಬನೇ ನಿಂತಿದ್ದ. ತನ್ನ ಟೀಕಾಸ್ತ್ರಗಳು ತಾಗಿಯೇ ಇಲ್ಲದವನಂತೆ ಮುಗುಳುನಗುತ್ತ ನಿಂತಿದ್ದ. ತಾಯಿಯ ಎದುರು ನಿಲ್ಲಲಾರದೆ ಮಕ್ಬೂಲ ಹೊರ ಅಂಗಳದಲ್ಲಿ ನಿಂತು ಇಣುಕಿ ನೋಡುತ್ತಿದ್ದ. ಅವನ ಮುಖದಲ್ಲಿ ತಾಯಿಯ ಬಗೆಗಿನ ಭಯಕ್ಕಿಂತ ಆಟಕ್ಕೆ ಹೋಗಲು ತಾಯಿಯಿಂದ ತನ್ನ ಗೆಳೆಯ ಹೇಗೆ ಅನುಮತಿ ದಕ್ಕಿಸಿಕೊಳ್ಳುತ್ತಾನೋ



ಎಂಬುದನ್ನು ತಿಳಿಯುವ ಕುತೂಹಲವೇ ಮಿಗಿಲಾಗಿತ್ತು. ಪ್ರತಿದಿನ ಸಂಜೆ ಆಟಕ್ಕೆ ಹೋಗುವ ಮೊದಲು ತಾಯಿಯ ಬೈಗುಳ ಕೇಳಿಕೊಳ್ಳಲೇಬೇಕು. ರಜೆಯಿದ್ದ ದಿನವಂತೂ ಬೆಳಗಿಂದಲೇ ಆಟ. ಇಲ್ಲವಾದರೆ, ರಜೆ ಕೊಡುವುದಾದರೂ ಏತಕ್ಕೆ? ಆದರೆ, ಇಷ್ಟೆಲ್ಲ ಬೈಯುವ ತಾಯಿ ತನ್ನನ್ನು ಅನಂತಕುಮಾರನೊಡನೆ ಆಟಕ್ಕೆ ಕಳುಹಿಸಲು ಒಪ್ಪುತ್ತಿದ್ದುದು ಹೇಗೆ, ಅದಕ್ಕೆ ಸಂಬಂಧಿಸಿದಂತೆ ಅನಂತನ ವಕಾಲತ್ತು ಹೇಗೆ ಪರಿಣಾಮಕಾರಿಯಾಗಿರುತ್ತಿತ್ತು ಎಂಬುದನ್ನು ತಿಳಿಯಲು ಮಕ್ಬೂಲ್ ಎಷ್ಟೇ ಗಮನವಿಟ್ಟು ನೋಡಿದರೂ ಆಲಿಸಿದರೂ ಗೊತ್ತಾಗುತ್ತಿರಲಿಲ್ಲ. ಗೆಳೆಯನ ತಾಯಿಯ ಟೀಕೆಗಳನ್ನೆಲ್ಲ ಅನಂತನ ಮುಗುಳುನಗೆಯೇ ಸೋಲಿಸುತ್ತಿತ್ತೋ, ಆಕೆಯ ಮಾತು ಮುಗಿಯುವವರೆಗೆ ಮೌನವಾಗಿ ನಿಂತೇ ಇರುವ ಅಚಲಯೋಗವು ಪರಿಣಾಮಕಾರಿಯಾಗುತ್ತಿತ್ತೋ, ಅಥವಾ.. ಅನಂತ ಅವನ ಮಾತಿನ ಕೌಶಲದಿಂದ ತನ್ನ ತಾಯಿಯನ್ನು ಒಪ್ಪಿಸಲು ಸಾಧ್ಯವಾಗುತ್ತಿತ್ತೋ..



ಅಗೋ, ಅನುಮತಿ ಸಿಕ್ಕಿಯೇ ಬಿಟ್ಟಿತು !

"ಸರಿ, ಇವತ್ತು ಒಂದು ದಿನ ಹೋಗಿ ಆಟ ಆಡ್ಕೊಳ್ಳಿ. ಬೇಗ ಮುಗಿಸಿ ಬರಬೇಕು.. ಆದ್ರ ಇವತ್ತು ಒಂದೇ ದಿನ ತಿಳೀತೇನು.. ನಾಳೆಯಿಂದ ಎಲ್ಲೂ ಹೋಗಾಂಗಿಲ್ಲ. ನೀ ಬಂದ ನಿಂತಿ ಅಂದ್ರ ನಾ ಏನ್ ಕಳಿಸಾಂಗಿಲ್ಲ.. ತಿಳೀತೇನು?"

ಮಕ್ಬೂಲನ ತಾಯಿಯ ಮಾತು ಮುಗಿಯುವ ಮುನ್ನವೇ ಹುಡುಗರಿಬ್ಬರೂ ಯಾವುದೋ ಮರದ ಮೇಲೆ ಕುಳಿತಿರುತ್ತಿದ್ದರು. ಕೊನೆಯ ವಾಕ್ಯದಲ್ಲಿ ಆಕೆ ವಿಧಿಸಿದ ಷರತ್ತು ಅವರ ಕಿವಿಗೆ ಬೀಳುತ್ತಲೇ ಇರಲಿಲ್ಲ. ಆದ್ದರಿಂದಲೇ ಮರುದಿನ ಸಂಜೆಯೂ ಇದೇ ಕಥಾನಕದ ಪುನರಾವರ್ತನೆಯಾಗುತ್ತಿತ್ತು. ಮರುದಿನದಿಂದ ಮಕ್ಬೂಲನನ್ನು ಅನಂತನೊಡನೆ ಆಡಲು ಕಳುಹಿಸುವುದಿಲ್ಲವೆಂದು ದೃಢವಾಗಿ ತೀರ್ಮಾನಿಸಿಕೊಂಡಿದ್ದ ತಾನು ಅನಂತನ ತಂತ್ರಕ್ಕೆ ಸೋಲುತ್ತಿದ್ದ ಬಗೆ ಹೇಗೆಂಬುದು ಆ ತಾಯಿಗೂ ತಿಳಿಯುತ್ತಿರಲಿಲ್ಲವೇನೋ. ಹಾಗಾಗಿ ಆಕೆ ಮನೆಯವರೊಡನೆ ಆಗಾಗ ಹೀಗೆ ಹೇಳುವುದಿತ್ತು: "ಕುಮಾರ ಭಾರೀ ತಂತ್ರಗಾರ ಇದಾನ. ನಾಳೆ ಅಂವಾ ದೊಡ್ಡ ರಾಜಕಾರಣಿ ಆಗ್ತಾನ, ಅಂವ ಮಂತ್ರಿ ಆಗೋದು ಖರೆ!"

ಹಾಗೆ ನೋಡಿದರೆ, ಅನಂತಕುಮಾರ- ಮಕ್ಬೂಲ್ ಪಟೇಲರಿಬ್ಬರೂ ತಮ್ಮ ಪಾಡಿಗೆ ತಾವು ಆಡಿಕೊಳ್ಳುವ ಸ್ವಭಾವದವರು. ಯಾವುದೇ ವಿನಾಶಕಾರಿ ಚೇಷ್ಟೆಗೆ ಎಳಸುವವರಲ್ಲ. ಆದರೂ ತಮ್ಮ ಕ್ರೀಡಾವಿನೋದಕ್ಕೆ ಹಿರಿಯರ ಕಣ್ಣೇಕೆ ಕುಸುರಾಗಬೇಕು ಎನ್ನುವುದು ಈ ಮಕ್ಕಳಿಗೆ ಅರ್ಥವಾಗುತ್ತಿರಲಿಲ್ಲ. ಮಕ್ಬೂಲನ ಅಣ್ಣ ಅತೀಕ್ ಪಟೇಲ್ ಆಗ ವೈದ್ಯಕೀಯ ಪದವಿಗಾಗಿ ಗಂಭೀರ ವ್ಯಾಸಂಗ ನಡೆಸುತ್ತಿದ್ದರು. ಈ ಹುಡುಗರು ಮನೆಯ ಬದಿಯ ನೇರಳೆ ಗಿಡದ ಮೇಲೋ, ಮನೆಯ ಹೆಂಚಿನ ಮೇಲೋ ಕುಳಿತು ಕಿರಿಕಿರಿಯಾಗುವಂತೆ ಸದ್ದು ಮಾಡುತ್ತ ಪ್ರಯೋಗ ನಡೆಸುತ್ತಿದ್ದರೆ ಓದಿಗೆ ಭಂಗ ಬಾರದಿರುತ್ತದೆಯೇ? ಆತ ಎದ್ದು ಕೋಲುಹಿಡಿದು ಬಂದು ಮಕ್ಕಳನ್ನು ಓಡಿಸಲು ಯತ್ನಿಸುವರು. ಈ ಮಕ್ಕಳು ಸಾಧ್ಯವಿದ್ದಷ್ಟು ಎತ್ತರದಲ್ಲಿ ಕುಳಿತು ತಮ್ಮ ಯೋಗಕ್ಷೇಮವನ್ನು ಕಾಪಾಡಿಕೊಳ್ಳುವರು; ದೊಡ್ಡವರ ಬೆದರಿಕೆ ಜಾಸ್ತಿಯಾದಾಗ ವಿಧಿಯಿಲ್ಲದೆ ಸ್ಥಳಾಂತರ ಮಾಡುವರು. ವಿಶೇಷವೆಂದರೆ, ಯಾವಾಗಲೂ ಓದಿಕೊಳ್ಳುತ್ತಿರುತ್ತಿದ್ದ ಮಕ್ಬೂಲನ ಸೋದರ ಯಾವಾಗಲಾದರೂ ಮನೆಯಿಂದ ಹೊರಗೆ ಕಂಡನೆಂದರೆ ಈ ಹುಡುಗರನ್ನು ಓಡಿಸುವ ಸಾಹಸದಲ್ಲೇ ತೊಡಗಿರುವನೆಂದು ಎಲ್ಲರೂ ಊಹಿಸಿಕೊಳ್ಳಬಹುದಾಗಿತ್ತು!



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಇತರ ಪದಾಧಿಕಾರಿಗಳು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದರು.

ಪುಟ 1 ರಿಂದ

## ಅನಂತ ಕನ್ನಡ ಪ್ರೇಮ



ಪುಸ್ತಕ ಪರಿಷೆ ಆರಂಭಿಸಿ, ಕನ್ನಡ ಪುಸ್ತಕಗಳ ವಿತರಣೆ, ಮಾರಾಟವನ್ನು ಪ್ರೋತ್ಸಾಹಿಸಿದ್ದರು. ಅನಂತಕುಮಾರರು ಸಂಸದರ ಪ್ರದೇಶಾಭಿವೃದ್ಧಿ ನಿಧಿಯಿಂದ ದೆಹಲಿ ಕರ್ನಾಟಕ ಸಂಘಕ್ಕೆ ಅನುದಾನ ನೀಡಿ, ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ, ಕನ್ನಡತನ, ಕರ್ನಾಟಕದ ಜನರಿಗೆ ನೆಲೆ ಕಲ್ಪಿಸಿದ್ದರು. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿಸುವಲ್ಲಿ ಅನಂತಕುಮಾರರ ಪ್ರಯತ್ನ ಗಮನಾರ್ಹ. ವಿಧಾನಸಭಾ ಕ್ಷೇತ್ರ ಮಟ್ಟದಲ್ಲೂ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಉತ್ತೇಜಿಸುತ್ತಿದ್ದರು.

ಕನ್ನಡ ಚಿತ್ರರಂಗದ ವರನಟ ಡಾ. ರಾಜಕುಮಾರ್ ಅವರಿಂದ ಮೊದಲುಗೊಂಡು ಎಲ್ಲ ಚಿತ್ರಕಲಾವಿದರು ಅನಂತಕುಮಾರರ ಸ್ನೇಹವಲಯದಲ್ಲಿದ್ದರು. ಅಂತೆಯೇ ಸಾಹಿತಿಗಳು, ಚಿಂತಕರು ಸೇರಿದಂತೆ ಕನ್ನಡದ ಎಲ್ಲ ಗಣ್ಯರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದ ಅನಂತಕುಮಾರ್, ಕನ್ನಡ ನಾಡು-ನುಡಿಗಳ ಅಭಿವೃದ್ಧಿಯನ್ನು ಕುರಿತು ಅವರೆಲ್ಲರೊಂದಿಗೆ ಚಿಂತನೆ ನಡೆಸುತ್ತಿದ್ದರು. ನಮ್ಮ ಸಂಸ್ಕೃತಿ, ಸಂಪ್ರದಾಯ, ಪರಂಪರೆಗಳ ಕುರಿತು ಅವರಲ್ಲಿ ಇದ್ದ ಅನನ್ಯ ಕಳಕಳಿಗೆ ಪ್ರತೀಕಗಳಿವು ●

## ಸಾಮಾಜಿಕ ಜಾಲತಾಣದಲ್ಲಿ




**ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಸರ್ಕಾರದಲ್ಲಿ ಶ್ರೀ ಅನಂತಕುಮಾರರು ನಾಗರಿಕ ವಿಮಾನಯಾನ ಖಾತೆ ಸಚಿವರಾಗಿದ್ದಾಗ ಭಾರತದ ಎಲ್ಲ ವಿಮಾನ ನಿಲ್ದಾಣಗಳಿಗೆ ಆಯಾ ಪ್ರದೇಶಗಳ ಐತಿಹಾಸಿಕ ಪುರುಷರ ಹೆಸರುಗಳನ್ನು ಇಡುವ ದಿಟ್ಟ ನಿರ್ಧಾರ ಕೈಗೊಂಡರು. ರಾಂಚಿಯ ವಿಮಾನ ನಿಲ್ದಾಣಕ್ಕೆ ಬಿರ್ಸಾ ಮುಂಡಾ ಹಾಗೂ ಮುಂಬೈ ವಿಮಾನ ನಿಲ್ದಾಣಕ್ಕೆ ಛತ್ರಪತಿ ಶಿವಾಜಿ ಟರ್ಮಿನಲ್ ಎಂದು ನಾಮಕರಣ ಮಾಡಿದರು. ಈ ಮಹಾನುಭಾವರ ಹೆಸರುಗಳನ್ನು ಚಿರಸ್ಥಾಯಿಯಾಗಿ ಉಳಿಸುವಲ್ಲಿ ಅನಂತಕುಮಾರರ ಈ ನಿರ್ಧಾರ ಐತಿಹಾಸಿಕವಾಗಿ ಮಹತ್ವದ್ದು.**

## ಸರಳ ಯೋಗಾಭ್ಯಾಸ

ಎಸ್. ರಾಘವೇಂದ್ರ ಪ್ರಸಾದ್
ಅಧ್ಯಕ್ಷರು - ಸಹಬಾಳ್ವೆ


## ಉಷ್ಟ್ರಾಸನ (Camel Pose)

ಸಂಸ್ಕೃತ ಭಾಷೆಯಲ್ಲಿ ಉಷ್ಟ್ರ ಎಂದರೆ ಒಂಟೆ ಎಂದೂ ಆಸನ ಎಂದರೆ ಭಂಗಿ ಎಂದೂ ಅರ್ಥ ಕೊಡುತ್ತದೆ. ಈ ಆಸನ ಮಾಡುವಾಗ ನಮ್ಮ ದೇಹ ಒಂಟೆಯ ಆಕಾರವನ್ನು ಹೋಲುವುದರಿಂದ ಇದನ್ನು ಉಷ್ಟ್ರಾಸನ ಎಂದು ಕರೆಯಲಾಗಿದೆ

**ಆಸನ ಮಾಡುವ ವಿಧಾನ:** 1. ಮೊದಲು ವಜ್ರಾಸನದಲ್ಲಿ ಕುಳಿತುಕೊಳ್ಳಿ 2. ನಿಧಾನವಾಗಿ ಮಂಡಿಯೂರಿ ನಿಲ್ಲಿ ಮತ್ತು ಸೊಂಟದ ಬದಿಯಲ್ಲಿ ನಿಮ್ಮ ಕೈಗಳನ್ನು ಇರಿಸಿ 3. ಮಂಡಿಗಳನ್ನು ಮತ್ತು ಪಾದಗಳನ್ನು ಕೊಂಚ ಆರಾಮದಾಯಕವಾಗಿ ಬೇರ್ಪಡಿಸಿ 4. ನಂತರ ನಿಧಾನವಾಗಿ ಉಸಿರು ತೆಗೆದುಕೊಂಡು ಹಿಂದಕ್ಕೆ ವಾಲುತ್ತ ಬಲ ಕೈಯನ್ನು ಬಲ ಹಿಮ್ಮಡಿಯ ಮೇಲೆ ಹಾಗೂ ಎಡ ಕೈಯನ್ನು ಎಡ ಹಿಮ್ಮಡಿಯ ಮೇಲೆ ತನ್ನಿ. 5. ಸೊಂಟದ ಭಾಗವನ್ನು ಗಮನಿಸುತ್ತ ಕೊಂಚ ಮುಂದಕ್ಕೆ ತಳ್ಳಿ. ತೊಡೆಗಳು ಲಂಬವಾಗಿರಲಿ ಮತ್ತು ತಲೆ ಹಾಗೂ ಬೆನ್ನು ಮೂಳೆ ಆರಾಮದಾಯಕವಾಗಿ ಹಿಂದಕ್ಕೆ ಬಾಗಲಿ. 6. ಅದೇ ಸಮಯದಲ್ಲಿ, ನಿಮ್ಮ ಬೆನ್ನು ಕಮಾನು ಆಕಾರ ಹೊಂದಲಿ ಮತ್ತು ತೋಳುಗಳು ನೇರವಾಗಿರಲಿ 7. ಈ ಸ್ಥಿತಿಯಲ್ಲಿ ಸಾಮಾನ್ಯ ಉಸಿರಾಟದಲ್ಲಿ ಆದಷ್ಟು ಸಮಯ ಆರಾಮವಾಗಿ ಉಳಿಯಿರಿ ನಂತರ ನಿಧಾನವಾಗಿ ಸಮಸ್ಥಿತಿಗೆ ಬನ್ನಿ.

**ಆಸನದ ಪ್ರಯೋಜನಗಳು:** ಈ ಆಸನ ಮಾಡುವುದರಿಂದ ಜೀರ್ಣಕ್ರಿಯೆ ಹಾಗೂ ಸಂತಾನೋತ್ಪತ್ತಿ ವ್ಯವಸ್ಥೆಯನ್ನು ಸುಧಾರಿಸುತ್ತದೆ. ದೇಹದ ಮುಂಭಾಗವನ್ನು ವಿಸ್ತರಿಸುತ್ತದೆ, ಬೆನ್ನು ಮತ್ತು ಭುಜಗಳನ್ನು ಸಹ ಬಲಪಡಿಸುತ್ತದೆ ಹಾಗೂ ಥೈರಾಯ್ಡ್ ಗ್ರಂಥಿಯನ್ನು ನಿಯಂತ್ರಿಸುತ್ತದೆ ಜೊತೆಗೆ ದೇಹದ ಕೆಳ ಬೆನ್ನು ನೋವನ್ನು ನಿವಾರಿಸುತ್ತದೆ ಮತ್ತು ಭಂಗಿಯನ್ನು ಸುಧಾರಿಸುತ್ತದೆ.

**ಎಚ್ಚರಿಕೆ ವಹಿಸಬೇಕಾದವರು:** ಅಧಿಕ ರಕ್ತದೊತ್ತಡ, ಹರ್ನಿಯಾ ಇರುವವರು, ಬೆನ್ನಿನ ಮತ್ತು ಕುತ್ತಿಗೆಯ ಕಾಯಿಲೆ ಇದ್ದಲ್ಲಿ ಹಾಗೂ ಶಸ್ತ್ರಚಿಕಿತ್ಸೆ ಅಥವಾ ಗಾಯವಾಗಿದ್ದಲ್ಲಿ ಅನುಭವಿ ಶಿಕ್ಷಕರ ಮೇಲ್ವಿಚಾರಣೆಯೊಂದಿಗೆ ಮಾತ್ರ ಈ ಭಂಗಿಯನ್ನು ನಿರ್ವಹಿಸಿ.



# ವಿದ್ಯಾರ್ಥಿನಾಯಕರಿಗೊಂದು ಮಾರ್ಗದರ್ಶಿ – "ಕರಾಳ ಪತ್ರ"

ನಾಯಕತ್ವದ ಗುಣ ಹುಟ್ಟಿನಿಂದಲೇ ಬರುತ್ತದೆ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಉತ್ತಮ ನಾಯಕನೊಬ್ಬ ತನ್ನ ಸಮಕಾಲೀನ ಸಮಾಜದ ವರ್ತಮಾನ ಮತ್ತು ಭವಿಷ್ಯದ ಬಗ್ಗೆ ಮಾತ್ರ ಚಿಂತಿಸುವುದಿಲ್ಲ; ಆತ ಇಡೀ ಜಗತ್ತಿನ ಭವಿಷ್ಯದ ಕುರಿತು ಚಿಂತಿಸುತ್ತಾನೆ. ಇವೆರಡೂ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುವಂತೆ ಅನಂತಕುಮಾರ್ ಬದುಕಿದರು.

ಅನಂತಕುಮಾರರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಅವಧಿ(೧೯೮೫-೮೭)ಯಲ್ಲಿ ರಾಜ್ಯ ಶಿಕ್ಷಣರಂಗದ ಅವ್ಯವಸ್ಥೆಯ ಕುರಿತು ಕರಾಳಪತ್ರವೊಂದನ್ನು ಪ್ರಕಟಿಸಿದರು. ಶಿಕ್ಷಣದ ಬಗ್ಗೆ ಕಾಳಜಿ ಇರುವ ಪ್ರತಿಯೊಬ್ಬರೂ ಗಮನಿಸಲೇಬೇಕಾದ ಸಾರ್ವಕಾಲಿಕ ಮಹತ್ವ ಹೊಂದಿರುವ ದಾಖಲೆಯಿದು ಎಂದರೆ ತಪ್ಪಾಗಲಾರದು. ಸಮಸ್ಯೆಯ ಅರಿವು ಮೇಲುನೋಟಕ್ಕೆ ಉಂಟಾಗುವುದಿಲ್ಲ. ಅದರ ಆಳ, ಅಗಲಗಳ ಪರಿಚಯ ಮಾಡಿಕೊಳ್ಳಲು ಅಧ್ಯಯನ ಶೀಲತೆ ಬೇಕು. ಅಧ್ಯಯನದಿಂದ ಮೂಡಿದ ಅರಿವು ವ್ಯಕ್ತಿಯನ್ನು ಕರ್ತೃತ್ವದತ್ತ ಪ್ರೇರಿಸುತ್ತದೆ. ಕಾಲಿಗೆ ಚಕ್ರ ಕಟ್ಟಿಕೊಂಡು ರಾಜ್ಯದ ಉದ್ದಗಲಗಳನ್ನು ಸುತ್ತಿದ ಅನಂತಕುಮಾರರು ಏಕತತ್ವಾಭ್ಯಾಸಿಯಂತೆ ಶಿಕ್ಷಣ ಕ್ಷೇತ್ರದ ವರ್ತಮಾನ ಸ್ಥಿತಿ ಮತ್ತು ಅದರ ಭವಿಷ್ಯದ ಕುರಿತು ಅಧ್ಯಯನ ಮಾಡಿದ್ದರು ಎಂಬುದಕ್ಕೆ ಸಾಕ್ಷಿ, ಈ ಕರಾಳಪತ್ರ.

"ರಾಜಕೀಯ ಹಸ್ತಕ್ಷೇಪ ಮತ್ತು ಸ್ವಾರ್ಥ ರಾಜ್ಯದ ವಿಶ್ವವಿದ್ಯಾನಿಲಯಗಳ ಪ್ರಗತಿಗೆ ದೊಡ್ಡ ಅಡ್ಡಿಯಾಗಿವೆ. ಸರಿಯಾದ ನೇತೃತ್ವದ ಕೊರತೆ, ಜಾತಿ, ಪ್ರಾದೇಶಿಕ ಮನೋಭಾವಗಳ ಫಲವಾಗಿ ವಿ.ವಿ.ಗಳ ಬೆಳವಣಿಗೆಗೆ ಧಕ್ಕೆಯುಂಟಾಗಿದೆ. ...ಉಪಕುಲಪತಿಗಳಿಗಿದ್ದ ಗೌರವ ಸ್ಥಾನ ಕಡಿಮೆಯಾಗಿದೆ. ಒಬ್ಬ ಕುಲಪತಿ ಮುಖ್ಯಮಂತ್ರಿ ಮತ್ತು ರಾಜ್ಯಪಾಲರನ್ನು ಭೇಟಿಸುವುದು ಕಷ್ಟವಾಗಿದೆ." (ಡಾ॥ ಹಾ. ಮಾ. ನಾಯಕ್ ಭಾಷಣದ ವರದಿ, ಪ್ರ.ವಾ. ೧೪/೦೩/೧೯೮೭)

"ಈ ವರ್ಷ ಕಟ್ಟಡ, ವಿಜ್ಞಾನ ಪ್ರಯೋಗಶಾಲೆ, ಗ್ರಂಥಾಲಯ ಸೌಲಭ್ಯವಿರುವ (ಕಾಲೇಜುಗಳಲ್ಲಿ) ಬಗ್ಗೆ ಸಮೀಕ್ಷೆ ನಡೆಸುವ ಅಗತ್ಯವಿದೆ" (ಮಾಜಿ ಶಿಕ್ಷಣ ಸಚಿವ ಡಿ ಮಂಜುನಾಥ್, ಪ್ರ.ವಾ. ೧೭/೦೭/೧೯೮೬)

"ಸ್ವಾಯತ್ತವಾಗಿ ಕಾರ್ಯನಿರ್ವಹಿಸಬೇಕಾಗಿದ್ದ ವಿ.ವಿ.ಗಳು ರಾಜ್ಯಸರ್ಕಾರದ ಶಿಕ್ಷಣ ಇಲಾಖೆಯ ಸಾಮಾನ್ಯ ಇಲಾಖೆಗಳಂತೆ ಕಾರ್ಯನಿರ್ವಹಿಸುವಂತೆ ಮಾಡಿದೆ" (ಪ್ರಕಾಶಕರ ಮಾತು)

"The Chancellors have become only glorified clerks" – K N Raj Committee Report "ಅಗಸ್ಟ್ ಬಂದರೂ ಪಠ್ಯಕ್ರಮ ಏನೆಂದು ಒಂದು ಲಕ್ಷ ಎಂಭತ್ತು ಸಾವಿರ ವಿದ್ಯಾರ್ಥಿಗಳಿಗಾಗಲೀ, ಅಧ್ಯಾಪಕರಿಗಾಗಲೀ ತಿಳಿಯದೆ ಒಂದೂವರೆ ತಿಂಗಳು ಪಾಠವಿಲ್ಲದೆ ಕಳೆಯಬೇಕಾಯಿತು" (೧೯೮೬ರಲ್ಲಿ)

"ಸುಮಾರು ೩೦ ಪದವಿಪೂರ್ವ ಕಾಲೇಜುಗಳು ಅವುಗಳ ಅತ್ಯಂತ ಶೋಚನೀಯ ಶೈಕ್ಷಣಿಕ ಗುಣಮಟ್ಟದಿಂದಾಗಿ ಮುಚ್ಚುವ ಸಂಕಟವನ್ನೇ ತೋರಿಸುತ್ತಿವೆ. ಇದೇ ಸ್ಥಿತಿ ಮುಂದುವರೆದರೆ ವಿದ್ಯಾರ್ಥಿಗಳ ಸಂಖ್ಯೆಯೇ ಇಲ್ಲದೆ ೨೭ ಖಾಸಗಿ ಪದವಿಪೂರ್ವ ಕಾಲೇಜುಗಳು ಮುಚ್ಚುವ ಹೆದರಿಕೆಯಿದೆ" (ಸದನದಲ್ಲಿ ಅಂದಿನ ಶಿಕ್ಷಣ ಸಚಿವರಾದ ಶ್ರೀ ಡಿ ಮಂಜುನಾಥ್) "ಈ (ದ್ವಿತೀಯ ಪಿಯುಸಿ ಪಠ್ಯ) ಕೃತಿಯ ಬಹುದೊಡ್ಡ ಸಾಧನೆಯೆಂದರೆ ಪಠ್ಯಭಾಗವನ್ನು ಮೊಟಕುಗೊಳಿಸಿರುವುದು, ಹೈಸ್ಕೂಲ್ ಮಟ್ಟದ ವಿದ್ಯಾರ್ಥಿಗಳೇ ಇದಕ್ಕಿಂತ ಉತ್ತಮ ಮಟ್ಟದ ಕನ್ನಡ ಸಾಹಿತ್ಯವನ್ನು ಓದುತ್ತಾರೆ" (ಓರ್ವ ಶಿಕ್ಷಣ ಪ್ರೇಮಿ) "ಮೇಷ್ಟ್ರು ಇಲ್ಲದ ಶಾಲೆಗೆ ಮಕ್ಕಳನ್ನೇಕೆ ಕಳಿಸಬೇಕೆಂಬುದು ಅವರ (ತುರುವೇಕೆರೆ ಬಳಿಯ ಒಳಗೆರೆ ಗ್ರಾಮಸ್ಥರ) ಪ್ರಶ್ನೆ" (ಪ್ರಜಾವಾಣಿ ವರದಿ) ಇವೆಲ್ಲ ನಮೂದಿತವಾಗಿರುವುದು ಅನಂತಕುಮಾರರು ಅಂದು ಪ್ರಕಟಿಸಿದ ಕರಾಳಪತ್ರದಲ್ಲಿ. ಆವರಣದಲ್ಲಿ ಉಲ್ಲೇಖಗಳನ್ನು ಕೊಟ್ಟಿರದಿದ್ದರೆ ಇವೆಲ್ಲವೂ ಇಂದಿನ ಸಮಸ್ಯೆಗಳೇ ಎಂದು ಓದುಗರು ನಿರ್ಧರಿಸುತ್ತಿದ್ದರು.

ಅನಂತಕುಮಾರರ ದೂರದರ್ಶಿತ್ವವನ್ನು ತೋರಿಸಲು ಇತ್ತೀಚಿನ ಎರಡು ಪತ್ರಿಕಾ ವರದಿಗಳನ್ನು ಇಲ್ಲಿ ಉಲ್ಲೇಖಿಸಬಹುದು.




"ಲಕ್ಷಾಂತರ ರೂ. ಖರ್ಚು ಮಾಡಿ ಕಟ್ಟಿದ ಶಾಲೆಯ ಕಟ್ಟಡವೊಂದು ಪಾಳುಬಿದ್ದ ಕೊಂಪೆಯಂತಾಗಿದ್ದು ವ್ಯಕ್ತಿಯೋರ್ವ ಈ ಕಟ್ಟಡವನ್ನು ಪಂಕ್ಚರ್ ಶಾಪ್ ಆಗಿ ಪರಿವರ್ತಿಸಿಕೊಂಡಿದ್ದಾನೆ" (ವಿಶ್ವವಾಣಿ ೧೨/೧೧/೨೦೨೩)

"ಒಂದೇ ವರ್ಷದಲ್ಲಿ (೨೦೨೩) ಚಿಕ್ಕಮಗಳೂರು ಜಿಲ್ಲೆಯೊಂದರಲ್ಲಿಯೇ ೨೧ ಕನ್ನಡಶಾಲೆಗಳು ಬಂದ್ ಆಗಿವೆ, ಸರ್ಕಾರ ಮಧ್ಯಾಹ್ನದ ಬಿಸಿಯೂಟ, ಮೊಟ್ಟೆ-ಹಾಲು, ಶೂ-ಸಾಕ್ಸ್ ಅಂತೆಲ್ಲ ಹತ್ತಾರು ಯೋಜನೆ ಜಾರಿಗೆ ತಂದರೂ ಹೆತ್ತವರು ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸಲು ಮೂಗುಮುರಿಯುತ್ತಿದ್ದಾರೆ....... ಸರಕಾರ ಖಾಸಗಿ ಶಾಲೆಗಳಿಗೆ ಬೇಕಾಬಿಟ್ಟಿ ಅನುಮತಿ ನೀಡುತ್ತಿರುವುದರಿಂದಲೇ ಈ ಸ್ಥಿತಿ ಬಂದಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ...... ನೂರಾರು ಮಕ್ಕಳಿಗೆ ವಿದ್ಯಾದಾನ ಮಾಡಿದ ಸರಕಾರಿ ಶಾಲೆಗಳಿಂದು ಲೂಟಿಹೊಡೆದ ಕೋಟೆಯಂತಾಗಿವೆ" (ವಿಶ್ವವಾಣಿ ೦೩/೧೧/೨೦೨೩)

ಅಂದು ಅನಂತಕುಮಾರರು ಎತ್ತಿ ತೋರಿಸಿದ ಸಮಸ್ಯೆಗಳು ಇಂದು ಭಯಂಕರ ಭಸ್ಮಾಸುರನಂತೆ ಬೆಳೆದು ಇಡೀ ಶಿಕ್ಷಣರಂಗವನ್ನು ಭಸ್ಮಮಾಡಲು ತೊಡಗಿವೆ. ಕರಾಳಪತ್ರದಲ್ಲಿ ಶಿಕ್ಷಣರಂಗದ ಅವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೋಧಿಸಲಾಗಿದೆ. ಬೇಡಿಕೆಗಿಂತ ಹೆಚ್ಚು ವೈದ್ಯರನ್ನು, ಇಂಜಿನಿಯರುಗಳನ್ನು ತಯಾರು ಮಾಡುವ ಮೂಲಕ "ಪ್ರತಿಭೆ ರಫ್ತು" ಮಾಡುತ್ತೇವೆ ಎನ್ನುವ ವಾದದ ಪೊಳ್ಳುತನ, ಅದರಿಂದ ಹೆಚ್ಚಿದ ನಿರುದ್ಯೋಗಿ ಇಂಜಿನಿಯರುಗಳ ಸಂಖ್ಯೆ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳ ಕುಸಿಯುತ್ತಿರುವ ಗುಣಮಟ್ಟ, ಕಾಲೇಜುಗಳಲ್ಲಿ ಸೌಲಭ್ಯಗಳ ಕೊರತೆ, ಪ್ರತಿಭೆ ಸಾಲದ ವಿದ್ಯಾರ್ಥಿಗಳ ಸಮಸ್ಯೆ, ಕ್ಯಾಪಿಟೇಷನ್ ಶುಲ್ಕದ ಆವಾಂತರ, ನವೀಕೃತವಾಗದ ಹಳೆಯ ಪಠ್ಯಕ್ರಮ, ಬೋಧಕ ಸಿಬ್ಬಂದಿಯ ಅನನುಭವ, ಕೊರತೆ ಮುಂತಾದ ಹಲವು ವಿಚಾರಗಳನ್ನು ಇಲ್ಲಿ ವಿಮರ್ಶೆಗೊಳಪಡಿಸಲಾಗಿದೆ.

ಈ ಪತ್ರದಲ್ಲಿ ಕೇವಲ ವೃತ್ತಿಪರ ಶಿಕ್ಷಣಸಂಸ್ಥೆಗಳ ಅವ್ಯವಸ್ಥೆಯ ಬಗೆಗೆ ಗಮನಹರಿಸದೆ, ಪಾಲಿಟೆಕ್ನಿಕ್ ಶಿಕ್ಷಣ, ವಿಶ್ವವಿದ್ಯಾನಿಲಯಗಳ ಶಿಕ್ಷಣ, ಪದವಿಪೂರ್ವ ಶಿಕ್ಷಣ ಮತ್ತು ಸಾರ್ವಜನಿಕ ಶಿಕ್ಷಣ – ಹೀಗೆ ಶಿಕ್ಷಣ ರಂಗದ ಎಲ್ಲ ಕ್ಷೇತ್ರಗಳ ಮೇಲೂ ಕ್ಷ-ಕಿರಣ ಬೀರಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ತಾಂಡವವಾಡುತ್ತಿದ್ದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಧಿಕಾರಸ್ಥರ ಬೇಜವಾಬ್ದಾರಿತನ, ದೂರದರ್ಶಿತ್ವದ ಕೊರತೆ, ಸರಕಾರದ ಹಸ್ತಕ್ಷೇಪ, ಜವಾಬ್ದಾರಿಯುತ ಸ್ಥಾನಗಳಿಗೆ ಕಳಂಕಿತರ ನೇಮಕ ಮುಂತಾದ ವಿಷಯಗಳನ್ನೂ ಕೂಲಂಕಷವಾಗಿ ಚರ್ಚಿಸಲಾಗಿದೆ. ಇದರಲ್ಲಿರುವ, ಅನುಮತಿಯಿಲ್ಲದೆ ವಿಶೇಷ ವಿಭಾಗಗಳ ಪ್ರಾರಂಭ, ವೇಳಾಪಟ್ಟಿ, ಮೌಲ್ಯಮಾಪನದಲ್ಲಿ ಅವ್ಯವಹಾರ, ಮರುಮೌಲ್ಯಮಾಪನದಲ್ಲಿ ಭ್ರಷ್ಟಾಚಾರ, ಫಲಿತಾಂಶ ಪ್ರಕಟಣೆಯಲ್ಲಿ ವಿಳಂಬ, ಪ್ರಶ್ನೆಪತ್ರಿಕೆಗಳ ಪುನರಾವರ್ತನೆ, ಕಟ್ಟಡಗಳ ಅನಧಿಕೃತ ಬಳಕೆ, ಕೃಪಾಂಕ ಪದ್ಧತಿ ಸೃಷ್ಟಿಸುವ ಸಮಸ್ಯೆ, ಅಂಕಪಟ್ಟಿಗಳ ಮಾರಾಟ, ಬೋಧಕ ಸಿಬ್ಬಂದಿಯ ಅಸಭ್ಯ ನಡವಳಿಕೆಯ ಬಗ್ಗೆ ಸಮಿತಿಗಳು ನೀಡಿದ ವರದಿಯ ನಿರ್ಲಕ್ಷ್ಯ, ಡೆಂಟಲ್-ಮೆಡಿಕಲ್ ಸೀಟುಹಗರಣ, ಯೋಜನಾರಹಿತ ಬೆಳವಣಿಗೆ, ಸಿಬ್ಬಂದಿಯ ಬೇಡಿಕೆಗಳ ನಿರ್ಲಕ್ಷ್ಯ, ವಿದ್ಯಾರ್ಥಿ ಸಂಘಗಳ ಮೌಲಿಕ ಅವನತಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿನಿಲಯಗಳ ದುರವಸ್ಥೆ, ಮುಂತಾದ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ.

ಕರಾಳಪತ್ರದ ಕೊನೆಯ ಪುಟಗಳಲ್ಲಿ ಅನಂತಕುಮಾರ್ ಮಾಡಿದ ಭಾಷಣದ ಸಾರಾಂಶ ಮತ್ತು ವಿದ್ಯಾರ್ಥಿಗಳ ಬೇಡಿಕೆಗಳ ಪಟ್ಟಿಯನ್ನೂ ನೀಡಲಾಗಿದೆ. ವಿದ್ಯಾರ್ಥಿಗಳ ಬೇಡಿಕೆಗಳೇ ಸಮಸ್ಯೆಯ ಪರಿಹಾರಕ್ಕೆ ಸೂತ್ರಪ್ರಾಯವಾಗಿರುವುದೂ ಇದರ ವಿಶೇಷ. ಇಲ್ಲಿ ನಮೂದಿತವಾಗಿರುವ ಪ್ರತಿಯೊಂದು ವಿಷಯಕ್ಕೂ ಪೂರಕ ದಾಖಲೆಗಳ ಉಲ್ಲೇಖಗಳನ್ನು ನೀಡಲಾಗಿದೆ, ಹೀಗಾಗಿ ವಿದ್ಯಾರ್ಥಿಗಳೇ ಪ್ರಕಟಿಸಿದ ದಾಖಲೆಯಾದರೂ ಇದಕ್ಕೆ ಒಂದು ಅಧಿಕೃತತೆ ದೊರೆತಿದೆ. ವಿದ್ಯಾರ್ಥಿದೆಸೆಯಲ್ಲಿ ನಾಯಕತ್ವ ವಹಿಸಲು ಮುಂದೆ ಬರುವ ಯುವಕರಿಗೆ ಒಂದು ಮಾರ್ಗದರ್ಶಿಯಂತಿದೆ ಈ ಕರಾಳಪತ್ರ. ಅಷ್ಟು ಮಾತ್ರವಲ್ಲ, ಒಂದು ಸಮಸ್ಯೆಯನ್ನು ಪ್ರಭಾವಶಾಲಿಯಾಗಿ ಸಮಾಜದ, ಅಧಿಕಾರಸ್ಥರ, ಮಾಧ್ಯಮದ ಮುಂದಿಡಲು ಬಯಸುವ ಎಲ್ಲರಿಗೂ ಇದೊಂದು ದಾರಿದೀಪ.

(ನಿರೀಕ್ಷಿಸಿ: ಮುಂದಿನ ಸಂಚಿಕೆಯಿಂದ "ಕರಾಳಪತ್ರ" ಕಿರುಹೊತ್ತಿಗೆಯು ಹಲವು ಕಂತುಗಳಲ್ಲಿ ಪ್ರಕಟಗೊಳ್ಳಲಿದೆ)

# ಸಹಕಾರದ ಮೂಲಕ ಸಮೃದ್ಧಿ



**ಪ್ರಭಾಕರ ದೇಶಪಾಂಡೆ**
ಧಾರವಾಡ ಜಿಲ್ಲೆಯ ಜೀರಗಿವಾಡ ಗ್ರಾ.ಪಂ. ಸದಸ್ಯ

ಸಮಾಜಸೇವೆ ಎನ್ನುವುದು ಒಂದು ರೀತಿಯ ಹುಚ್ಚು. ಸಂವಿಧಾನದ ಚೌಕಟ್ಟಿನೊಳಗೆ ಜನಪ್ರತಿನಿಧಿಯಾಗಿ ಆರಿಸಿ ಬಂದು ಜನಸೇವೆ ಮಾಡಬೇಕೆಂಬ ಇಚ್ಛೆಯೂ ಹಲವರಿಗಿರುತ್ತದೆ. ನಮ್ಮ ದೇಶದಲ್ಲಿ ಎಲ್ಲರಿಗಿಂತ ಮೊದಲು ಮಾತೃದೇವೋ ಭವ ಎಂದಿದ್ದಾರೆ. ಮೊದಲು ಮಾತೆಗೆ, ನಂತರ ಉಳಿದವರಿಗೆ ನಮಸ್ಕಾರ. ನಮ್ಮ ಹಿಂದಿನವರು ತಾಯಿ, ತಂದೆ ಮತ್ತು ಗುರುಗಳು ನಮಗೆ ದೇವರು ಎಂದರೇ ಹೊರತು ಸರಕಾರದ ಮುಖ್ಯಸ್ಥರನ್ನು ಅಥವಾ ಇತರ ಜನಪ್ರತಿನಿಧಿಗಳನ್ನು ದೇವರು ಎನ್ನಲಿಲ್ಲ. ತಂದೆ, ತಾಯಿ ಮತ್ತು ಗುರು - ಈ ಮೂರು ಸ್ಥಾನಗಳ ಗೌರವವನ್ನು ನಾವು ಉಳಿಸಿಕೊಂಡು ಬಂದರೆ ಸಮಾಜದ ಬಹುತೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಸ್ಥಳೀಯ ಮಟ್ಟದಲ್ಲಿ ಜನಪ್ರತಿನಿಧಿಗಳು ಈ ದಿಸೆಯಲ್ಲಿ ಗಮನ ಹರಿಸಬೇಕು.

ನಮ್ಮ ಸಂವಿಧಾನವನ್ನು ರಚಿಸಿದವರು ಬೇರೆ ಬೇರೆ ಹಂತಗಳ ಆಡಳಿತ ವ್ಯವಸ್ಥೆಯನ್ನು ನಿರೂಪಿಸಿದ್ದಾರೆ. ಇತರ ಎಲ್ಲ ಹಂತಗಳಲ್ಲಿ ಪಕ್ಷರಾಜಕೀಯಕ್ಕೆ ಅವಕಾಶವಿದ್ದರೂ ಗ್ರಾಮ ಪಂಚಾಯಿತಿಗಳಲ್ಲಿ ಪಕ್ಷರಾಜಕೀಯಕ್ಕೆ ಅವಕಾಶವಿಲ್ಲ. ಗ್ರಾಮಗಳ ಆಡಳಿತದಲ್ಲಿ ರಾಜಕೀಯ ಇರಬಾರದೆಂದು ರಾಷ್ಟ್ರಪಿತ ಮಹಾತ್ಮಾಗಾಂಧಿಯವರು ಹೇಳಿದ್ದರು. ಸಂವಿಧಾನಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಕೂಡ ಹಳ್ಳಿಗಳು ಹಾಳಾದರೆ ದೇಶ ಹಾಳಾಗುತ್ತದೆ ಎಂದಿದ್ದರು. ರಾಜಕೀಯದ ಪ್ರವೇಶದಿಂದ ಹಳ್ಳಿಗಳೂ ಹಾಳಾಗುತ್ತಿರುವುದನ್ನು ನಾವು ಇಂದು ನೋಡುತ್ತಿದ್ದೇವೆ.

ಒಂದು ಹಳ್ಳಿಯನ್ನು ಪ್ರವೇಶ ಮಾಡಿದಾಗ ಮೊದಲಿಗೆ ಇಲ್ಲಿ ಸಮಾನತೆಯಿದೆ, ಭೇದಭಾವ ಇರಲಿಕ್ಕಿಲ್ಲ ಎನ್ನಿಸುತ್ತದೆ. ಜನರು ಧರ್ಮಿಷ್ಠರು, ಜ್ಞಾನಿಗಳು, ಕ್ರಾಂತಿಕಾರರು ಎಂದು ಮುಂತಾಗಿ ಅನಿಸುವುದೂ ಸಹಜ. ಆದರೆ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಇಂತಹ ಸಮೂಹಗಳ ನಡುವೆಯೇ ಸಂಘರ್ಷವಿರುವುದು ಕಂಡುಬರುತ್ತದೆ. ಎಲ್ಲ ಸಂಘರ್ಷಗಳ ಹಿಂದೆಯೂ ಸ್ವಾರ್ಥವೇ ಅಡಗಿರುತ್ತದೆ. ಕಾರಣವಿಷ್ಟೇ, ನಾಗರಿಕರಾದ ನಮ್ಮಲ್ಲಿ ಸ್ವಂತ ವ್ಯಕ್ತಿತ್ವವಿಲ್ಲ, ಗುಣಗಳಿಲ್ಲ, ಮೌಲ್ಯಗಳಿಲ್ಲ, ಸಾಧನೆಯಿಲ್ಲ, ತಪಸ್ಸು ಇಲ್ಲ, ಬಂಡವಾಳವೂ ಇಲ್ಲ. ಹೀಗಾಗಿ ರಾಯಣ್ಣ, ಚೆನ್ನಮ್ಮ, ಶಿವಾಜಿ, ಅಂಬೇಡ್ಕರ್ ಮುಂತಾದವರನ್ನು ನಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತೇವೆ. ಇವರೆಲ್ಲ ಈ ದೇಶಕ್ಕಾಗಿ, ಸಂಸ್ಕೃತಿಗಾಗಿ ಜೀವ ತೆತ್ತವರು. ಇಂತಹ ಮಹನೀಯರನ್ನು ನಮ್ಮ ಮಟ್ಟಕ್ಕೆ ಎಳೆದು ತರಬಾರದು; ಅವರ ಮಟ್ಟಕ್ಕೆ ನಾವು ಏರಲು ಪ್ರಯತ್ನಿಸಬೇಕು. ಜನರು ನಮ್ಮನ್ನು ನಮ್ಮ ಸಾಧನೆಗಳ ಮೂಲಕ ಗುರುತಿಸುವಂತಾಗಬೇಕು.

ಕೆಲವು ವರ್ಷಗಳ ಹಿಂದೆ ಹಳ್ಳಿ ಹೇಗಿತ್ತೆಂದು ಯೋಚಿಸಿ ನೋಡಿ. ಮಹಾಪುರುಷರು, ಕ್ರಾಂತಿಕಾರಿಗಳು ನಮ್ಮ ಹೃದಯದಲ್ಲಿ ನೆಲೆಸಿದ್ದರು. ಆಗ ಯಾವುದೇ ಸಮಸ್ಯೆಗಳಿರಲಿಲ್ಲ. ಇಂದು ಅದೇ ಜನರು ಆ ಮಹಾಪುರುಷರ ಹೆಸರಿನಲ್ಲಿ ಗುಂಪು ಕಟ್ಟಿಕೊಂಡು ಜಗಳಕ್ಕೆ ನಿಂತಿದ್ದಾರೆ. ಎಲ್ಲ ಕಡೆ ಹಣದ ಪ್ರಭಾವ ಹೆಚ್ಚಾಗಿದೆ. ಇದು ರಾಜಕೀಯದ ಕೊಡುಗೆ.

ಕೆಲವೊಂದು ವರ್ಷಗಳಲ್ಲಿ ಮಳೆಯೇ ಬರುವುದಿಲ್ಲ. ಆಗ ಚಿಂತಿಸುವವರು ರೈತರು ಮಾತ್ರ. ಬೆಳೆ ಬರದಿದ್ದರೂ ಜೀವನ ನಡೆಸಲು ಹಣ ಬೇಕೇ ಬೇಕು. ಇಂತಹ ಸಮಯದಲ್ಲಿ ನಾಯಕರು ನಮಗೆ ಆಸೆ ತೋರಿಸುತ್ತಾರೆ. ಕೆಲವು ಪರಿಹಾರಗಳನ್ನೂ ಒದಗಿಸುತ್ತಾರೆ. ಆದರೆ ಇದರಿಂದ ನಮ್ಮ ಸಮಸ್ಯೆಗಳು ಶಾಶ್ವತವಾಗಿ ಪರಿಹಾರವಾಗುವುದಿಲ್ಲ. ಸ್ವಾತಂತ್ರ್ಯ ದೊರೆತು ೭೫ ವರ್ಷಗಳಾದರೂ ಹಳ್ಳಿಗಳಿಗೆ ನಿಜವಾದ ಸ್ವಾತಂತ್ರ್ಯ ದೊರೆತಿಲ್ಲ. ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ನಾವೇ ಹುಡುಕಿಕೊಳ್ಳುವಂತಾಗಬೇಕು. ಬಸವಣ್ಣನವರು ಕಾಯಕವೇ ಕೈಲಾಸ ಎಂದರು. ಆದರೆ ನಾವು ಕಾಯಕವನ್ನೇ ಮರೆತುಬಿಟ್ಟಿದ್ದೇವೆ. ದೇಶವನ್ನೇ ಕೊರೋನಾ ಮಹಾಮಾರಿ ಕಾಡುತ್ತಿದ್ದಾಗ ನಾವು ನಮ್ಮ ಊರಿನ ಕೆರೆಯನ್ನು ಪುನಶ್ಚೇತನಗೊಳಿಸಲು ಹೊರಟೆವು. ಎರಡು ಎಕರೆ ಮೂವತ್ತೊಂದು ಗುಂಟೆ ವಿಸ್ತೀರ್ಣದ ಕೆರೆ ಒತ್ತುವರಿಯಾಗಿ ಕೇವಲ ಇಪ್ಪತ್ತು ಗುಂಟೆ ಉಳಿದಿತ್ತು. ಊರಿನವರೆಲ್ಲ ಸೇರಿ ಅತಿಕ್ರಮಣಗಳನ್ನು ತೆರವು ಮಾಡಿಸಿದೆವು. ಒಡ್ಡುಗಳನ್ನು ನಿರ್ಮಿಸಿಕೊಂಡೆವು. ಸರಕಾರದ ಲೆಕ್ಕದಲ್ಲಿ ೭೦ ಲಕ್ಷ ರೂಪಾಯಿಯ ಕಾಮಗಾರಿಗಳನ್ನು ನಾವು ಕೇವಲ ೧೦ ಲಕ್ಷದ ೩೨ ಸಾವಿರ ರೂಪಾಯಿಗಳಲ್ಲಿ ಪೂರ್ಣಗೊಳಿಸಿದೆವು.

ಕೆರೆಯಿಂದ ಎತ್ತಿದ ಮಣ್ಣಿನಿಂದ ಒಂದು ಕಿಲೋಮೀಟರ್ ರಸ್ತೆಯನ್ನು ಮಾಡಿಕೊಂಡೆವು. ಊರಿನಲ್ಲಿ ನೀರು ನಿಲ್ಲುವ ಜಾಗಗಳನ್ನು ಸರಿಪಡಿಸಿದೆವು. ಈ ಕೆಲಸಗಳಿಗೆ ಯಾವ ಸಲಕರಣೆಗಳನ್ನೂ, ಅವುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಸೂಕ್ತ ಏರ್ಪಾಟು ಮಾಡಿದೆವು. ನಮ್ಮ ಊರಿನಲ್ಲಿ ಈಗ ನೀವು ಯಾವುದೇ ಮನೆಗೆ ಹೋದರೂ ಪ್ರತಿಯೊಂದು ಮನೆಯ ಗುದ್ದಲಿ, ಸಲಿಕೆ, ಬುಟ್ಟಿಗಳಿಗೆ ಒಂದೊಂದು ನಂಬರ್ ಇರುವುದನ್ನು ಕಾಣಬಹುದು. ಅಷ್ಟರ ಮಟ್ಟಿಗೆ ಇಡೀ ಊರು ಈ ಕಾರ್ಯದಲ್ಲಿ ತೊಡಗಿಕೊಂಡಿತ್ತು ಎಂಬುದಕ್ಕೆ ಇದು ನಿದರ್ಶನ. ಸರಕಾರದಿಂದ ಧನಸಹಾಯ ದೊರೆತ ಮಾತ್ರಕ್ಕೆ ಇಂತಹ ಕೆಲಸಗಳು ನಡೆಯುವುದಿಲ್ಲ. ಇದು ನಮ್ಮೂರು ಜೀರಗಿವಾಡದಲ್ಲಿ ಪಂಚಾಯಿತಿಯ ಸಹಕಾರದಿಂದ ನಡೆದ ಕೆಲಸ. ಮೊದಲು ನಮಗೆ ನಮ್ಮ ಊರಿನ ಹೆಸರು ಹೇಳಲು ಹಿಂಜರಿಕೆಯಾಗುತ್ತಿತ್ತು. ಇಂದು ಹೆಮ್ಮೆಯಿಂದ ಊರಿನ ಹೆಸರನ್ನು ಹೇಳುತ್ತಿದ್ದೇವೆ. ಸರಕಾರದಿಂದ ಗ್ರಾಮಪಂಚಾಯಿತಿಗಳಿಗೆ ಬರುವ ಸಹಾಯಧನವನ್ನು ಹೇಗೆ ಬಳಸಿಕೊಳ್ಳಬೇಕು ಎಂದು ಎಲ್ಲರೂ ಸೇರಿ ನಿರ್ಧರಿಸಿ ಊರಿಗೆ ಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದೇವೆ.

ಹಳ್ಳಿಗಳಿಗೆ ಪಂಚಾಯಿತಿಯ ಮೂಲಕ ಹಣ ಬರುತ್ತದೆ. ಪ್ರಧಾನ ಮಂತ್ರಿ ಉದ್ಯೋಗ ಖಾತರಿ ಯೋಜನೆಯಲ್ಲಿ ಒಂದು ದಿನಕ್ಕೆ ೩೦೯ ರೂಪಾಯಿ ಪಗಾರ ದೊರೆಯುತ್ತದೆ. ಈ ಯೋಜನೆಯನ್ನು ನಿರ್ವಂಚನೆಯಿಂದ ಬಳಸಿಕೊಂಡರೆ ಜನರಿಗೆ ಸಾಕಷ್ಟು ಅನುಕೂಲತೆ

ಪುಟ 8 ರಲ್ಲಿ ಮುಂದುವರಿದಿದೆ

# ಅನಂತ ವಾಗ್ಮಿತೆ



**ವೀರಣ್ಣ ಬ್ಯಾಗೋಟಿ**
ಅನಂತಕುಮಾರರ ಒಡನಾಡಿ

ಅನಂತಕುಮಾರರ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರೂ ಅವರೊಂದಿಗೆ ಕಳೆದ ದಿನಗಳನ್ನು ಸ್ವಾರಸ್ಯಕರವಾಗಿ ನೆನಪಿಸಿಕೊಳ್ಳುತ್ತಾರೆ. ಬೀದರಿನ ಶ್ರೀ ವೀರಣ್ಣ ಬ್ಯಾಗೋಟಿಯವರು ನೆನಪಿಸಿಕೊಂಡ ಎರಡು ಸಂಗತಿಗಳನ್ನು ಈ ಮುಂದೆ ಪ್ರಸ್ತುತಪಡಿಸಲಾಗಿದೆ.

**ಅಂವಾ, ದೊಡ್ಡ ಸೇತುವೆಯನ್ನೇ ಮಾಯ ಮಾಡುತ್ತಾನೆ!**

ಒಬ್ಬ ಜಾದುಗಾರ ಜನಗಳನ್ನು ಸೇರಿಸಿ ಜಾದು ಮಾಡುತ್ತಿದ್ದ. ಅವನ ಆಟ ಶುರುವಾಯ್ತು, ಬಾಯಲ್ಲಿ ಬ್ಲೇಡ್ ಅಗಿದು, ಅಗಿದು ತಿನ್ನುತ್ತಿದ್ದ. ಜೀವಂತ ಕೋಳಿಯನ್ನು ಮಾಯ ಮಾಡಿಬಿಡುತ್ತಿದ್ದ. ಸೇರಿದ್ದ ಜನರೆಲ್ಲ ಚಪ್ಪಾಳೆ ಮೇಲೆ ಚಪ್ಪಾಳೆ ಹೊಡೆಯುತ್ತಿದ್ದರು, ಅಲ್ಲಿಯೇ ಇದ್ದ ಒಬ್ಬ ಹಳ್ಳಿಯ ಮನುಷ್ಯ ಕೂಗಿ ಹೇಳಿದ, "ಓ ಜಾದಪ್ಪ, ನೀನು ಮಾಡಿದ ಜಾದುಗಿಂತ ಭಾರೀ ಜಾದು ಮಾಡುವವ ನಮ್ಮೂರಲ್ಲಿದ್ದಾನೆ. ಅಂವಾ ನಮ್ಮ ರಾಜಕಾರಣಿ. ಅಂವಾ ದೊಡ್ಡ ಸೇತುವೆಯನ್ನೇ ಮಾಯ ಮಾಡುತ್ತಾನೆ, ಬಾವಿ, ಬಾವಿಗಳನ್ನೇ ಮಾಯ ಮಾಡಿಬಿಡುತ್ತಾನೆ. ಅವನ ಮುಂದೆ ನಿನ್ನ ಜಾದು ಏನಲ್ಲ ಬಿಡು" ಎಂದ. ಸಭಿಕರೆಲ್ಲ ಗೊಳ್ಳೆಂದು ನಕ್ಕರು. ಆದರೆ, ವಿಷಯದ ಗಹನತೆ ಅವರೆಲ್ಲರಿಗೂ ಅರ್ಥವಾಗಿತ್ತು.

(ಭ್ರಷ್ಟಾಚಾರವನ್ನು ವಿರೋಧಿಸಿ ೧೯೮೬ರಲ್ಲಿ ಅಭಾವಿಪ ಹಮ್ಮಿಕೊಂಡಿದ್ದ ಹೋರಾಟದ ಸಂದರ್ಭದಲ್ಲಿ ಶ್ರೀ ಹೆಚ್. ಎನ್. ಅನಂತಕುಮಾರರು ಹೇಳಿದ ವಿಡಂಬನೆಯ ಮಾತುಗಳಿವು.)

**ಪದವಿಗಳು ಮಾರಾಟಕ್ಕಿವೆ**

ಒಬ್ಬ ಸರದಾರ ಕುದುರೆ ಸವಾರಿ ಮಾಡುತ್ತಾ, ಬಜಾರಿನಲ್ಲಿ ಹೋಗುತ್ತಿರುತ್ತಾನೆ. ಅವನಿಗೆ ಒಂದು ಅಂಗಡಿಯ ಮುಂದೆ ನೇತುಹಾಕಿದ ಫಲಕದಲ್ಲಿ ಇಲ್ಲಿ "ಪದವಿ ಮಾರಲಾಗುವುದು" ಎಂದು ಬರೆದಿರುವುದು ಕಾಣಿಸುತ್ತದೆ. ಆ ಅಂಗಡಿಗೆ ಹೋಗಿ ಒಂದು ಪದವಿ ಖರೀದಿಸಿ ಕುದುರೆಯ ಕೊರಳಿಗೆ ನೇತುಹಾಕಿ ಬಜಾರಿನಲ್ಲಿ ಪ್ರಯಾಣ ಮುಂದುವರಿಸುತ್ತಾನೆ. ಅವನನ್ನು ನೋಡಿದ ಜನರು, "ಕುದುರೆಗೆ ಪದವಿಯಿದೆ, ಸರದಾರನಿಗೆ ಇಲ್ಲ" ಎಂದು ಮಾತನಾಡಿಕೊಳ್ಳುತ್ತಾರೆ.

ಆಗ ಆ ಸರದಾರ ತನಗಾಗಿಯೂ ಒಂದು ಪದವಿ ಖರೀದಿಸಿಕೊಳ್ಳುವುದು ಒಳ್ಳೆಯದು ಎಂದು ಭಾವಿಸಿ ಅದೇ ಅಂಗಡಿಗೆ ಹೋಗಿ "ನನಗೊಂದು ಪದವಿ ಕೊಡಪ್ಪ" ಎಂದು ಕೇಳುತ್ತಾನೆ. ಆಗ ಅಂಗಡಿಯವನು "ಇಲ್ಲಿ ಕುದುರೆಗೆ ಮಾತ್ರ ಪದವಿ ಮಾರಾಟ ಮಾಡಲಾಗುವುದು, ಕತ್ತೆಗಳಿಗಲ್ಲ" ಎಂದು ಹೇಳುತ್ತಾನೆ. ಇಲ್ಲಿ ಕುದುರೆ ಯಾರು? ಕತ್ತೆ ಯಾರು? ನಿಮ್ಮ ಊಹೆಗೆ ಬಿಟ್ಟದ್ದು.

(ಪದವಿ ಮಾರಾಟದ ವಿರುದ್ಧ ಅಭಾವಿಪ ನಡೆಸಿದ ಹೋರಾಟದ ಭಾಗವಾಗಿ ಡಿಸೆಂಬರ್, ೧೯೮೬ರಲ್ಲಿ ಕಲಬುರಗಿಯ ವೀರಶೈವ ಕಲ್ಯಾಣ ಮಂಟಪದಲ್ಲಿ ಮಾಡಿದ ಭಾಷಣದಿಂದ)

# ಹೋರಾಟಗಳ ಹಿಂದಿನ ಶಕ್ತಿ ಅನಂತಕುಮಾರ್






**ಪದ್ಮನಾಭ ಭಟ್ಟ**
ಬಿಜೆಪಿಯ ಹಿರಿಯ ಮುಖಂಡರು

ನಾನು ಅನಂತಕುಮಾರರನ್ನು ಮೊದಲು ನೋಡಿದ್ದು ಶಿಕಾರಿಪುರ ತಾಲೂಕಿನಲ್ಲಿ ಜೀತದಾಳುಗಳ ಹೋರಾಟದ ಸಂದರ್ಭದಲ್ಲಿ. ಆಗ ಸುಮಾರು 15 ದಿವಸಗಳವರೆಗೂ ತಾಲೂಕು ಬೋರ್ಡ್ ಕಚೇರಿಯ ಮುಂದೆ ಧರಣಿ ನಡೆದಿತ್ತು. ಅನಂತಕುಮಾರರು ಬಿಜೆಪಿ ಪರವಾಗಿ ಬಂದಿದ್ದರು. ಅದಾಗಲೇ, ಬಿಜೆಪಿಯ ಬೆಳವಣಿಗೆಯಲ್ಲಿ ಅನಂತಕುಮಾರರು ಪ್ರಮುಖ ಪಾತ್ರ ವಹಿಸಲು ತೊಡಗಿದ್ದರು.

ಸಾಮಾಜಿಕ ಚಿಂತನೆ ಹೊಂದಿದ್ದ ಅನಂತಕುಮಾರರು ಬಡವರು ಮತ್ತು ಕೂಲಿ ಕಾರ್ಮಿಕರ ಕಷ್ಟಗಳ ಬಗ್ಗೆ ಚಿಂತನೆ ನಡೆಸುತ್ತಿದ್ದರು. ಯಡಿಯೂರಪ್ಪನವರು ಎಲ್ಲ ಹೋರಾಟಗಳ ನೇತೃತ್ವ ವಹಿಸುತ್ತಿದ್ದರೆ, ಅವುಗಳ ಹಿಂದಿನ ಶಕ್ತಿಯಾಗಿ ಅನಂತಕುಮಾರರು ಇದ್ದರು. ನಾನು, ಯಡಿಯೂರಪ್ಪ ಹಾಗೂ ಅನಂತಕುಮಾರರು ಕೂಡಿಯೇ ಹೋರಾಟದ ಯೋಜನೆಗಳನ್ನು ನಿರೂಪಿಸುತ್ತಿದ್ದರೂ ಯೋಜನೆಯ ಮುಖ್ಯ ಅಂಶಗಳನ್ನು ಅನಂತಕುಮಾರರೇ ನಿರ್ಧರಿಸುತ್ತಿದ್ದರು. ಅವರು ಹೋರಾಟ ಪ್ರಾರಂಭವಾಗುವುದಕ್ಕೂ ಮೊದಲೇ ಆಯಾ ಸ್ಥಳಗಳಿಗೆ ಭೇಟಿನೀಡಿ ಕಾರ್ಯಕ್ರಮಗಳನ್ನು ಜನರೊಂದಿಗೆ ಚರ್ಚಿಸಿ ವೇದಿಕೆಯನ್ನು ಸಿದ್ಧಪಡಿಸಿರುತ್ತಿದ್ದರು.

೧೯೮೨ರಲ್ಲಿ ಒಟ್ಟು ನಾಲ್ಕು ಬಾರಿ ರೈತಹೋರಾಟ ನಡೆಸಿದ್ದೆವು. ಬನವಾಸಿಯಿಂದ ಬೆಂಗಳೂರು, ಬಸವನಬಾಗೇವಾಡಿಯಿಂದ ಬೆಂಗಳೂರು - ಹೀಗೆ ರಾಜ್ಯದ ನಾಲ್ಕು ಭಾಗಗಳಿಂದ ಬೆಂಗಳೂರಿಗೆ ರೈತರ ಜಾಥಾ ನಡೆಸಿ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಿದೆವು. ಹುಬ್ಬಳ್ಳಿಯ ಸಭೆಗೆ ಅಟಲ್ ಬಿಹಾರಿ ವಾಜಪೇಯಿ ಆಗಮಿಸಿ ಲಕ್ಷಾಂತರ ಜನರನ್ನುದ್ದೇಶಿಸಿ ಮಾತನಾಡಿದರು. ಈ ಎಲ್ಲ ಹೋರಾಟಗಳ ಸಂಪೂರ್ಣ ರೂಪುರೇಷೆಯನ್ನು ತಯಾರು ಮಾಡಿದವರು, ಅನಂತಕುಮಾರ್.

ಹೋರಾಟದ ಅಂಗವಾಗಿ ನಡೆದ ಪಾದಯಾತ್ರೆಯನ್ನು ಒಟ್ಟು ಹದಿಮೂರು ಜಿಲ್ಲೆಗಳ ಮೂಲಕ ಹಾದುಹೋಗುವಂತೆ ಆಯೋಜಿಸಲಾಗಿತ್ತು. ಜಿಲ್ಲಾ ಕೇಂದ್ರಗಳಲ್ಲಿ ನಡೆದ ದೊಡ್ಡ ಸಭೆಗಳಲ್ಲಿ ಅನಂತಕುಮಾರರೇ ಭಾಷಣ ಮಾಡುತ್ತಿದ್ದರು. ಸಣ್ಣ ಪುಟ್ಟ ಸಭೆಗಳನ್ನು ನಾವೇ ನಿರ್ವಹಿಸಿಕೊಂಡು ಹೋಗುತ್ತಿದ್ದೆವು. ಅನಂತಕುಮಾರರ ಭಾಷಣ ಯಾವಾಗಲೂ ವಿಷಯಾಧಾರಿತವಾಗಿರುತ್ತಿತ್ತು. ವಾಜಪೇಯಿಯವರಂತೆಯೇ ಅನಂತಕುಮಾರರೂ ಜನರನ್ನು ತಮ್ಮ ವಾಗ್ಝರಿಯಿಂದಲೇ ಆಕರ್ಷಿಸುತ್ತಿದ್ದರು. ಒಂದು ಸಣ್ಣ ವಿಷಯ ಸಿಕ್ಕಿದರೂ ಅದನ್ನು ವಿಸ್ತರಿಸಿ ಹೇಳುವ ಕಲೆ ಅವರಿಗೆ ಸಿದ್ಧಿಸಿತ್ತು. ಅವರದು ನೇರ ನುಡಿಯ ತತ್ತ್ವಬದ್ಧ ರಾಜಕಾರಣ. ಅವರು ತಾವು ನಂಬಿದ ಮೌಲ್ಯಗಳಿಂದ ಎಂದಿಗೂ ದೂರಸರಿಯಲಿಲ್ಲ.

ಈ ಎಲ್ಲ ಹೋರಾಟಗಳ ಸಂದರ್ಭದಲ್ಲಿ ನಮ್ಮ ಹತ್ತಿರ ಹಣಕಾಸು ಇರುತ್ತಿರಲಿಲ್ಲ, ಅನಂತಕುಮಾರರ ಬಳಿಯೂ ಇರುತ್ತಿರಲಿಲ್ಲ. ಪಾರ್ಟಿಯಲ್ಲೂ ದುಡ್ಡಿರಲಿಲ್ಲ. ಹೀಗಾಗಿ ನಾವು ದೊಡ್ಡದೊಡ್ಡ ಹೋರಾಟಗಳನ್ನು ಅತಿ ಕಡಿಮೆ ಖರ್ಚಿನಲ್ಲಿ ನಡೆಸಬೇಕಾಯಿತು. ಅವರು ಬಹಳಷ್ಟು ಓದುತ್ತಿದ್ದರು. ಹೊರ ದೇಶದ ಸಾಕಷ್ಟು ವಿಚಾರಗಳನ್ನು ಹೇಳುತ್ತಿದ್ದರು. ಅವರು ಉತ್ತಮ ಭಾಷಣಕಾರರಾಗಿದ್ದರು. ಯಾವುದೇ ಒಂದು ವಿಚಾರದ ಬಗ್ಗೆ ಮಾತನಾಡಬೇಕೆಂದರೆ ಸ್ಪಾಂಟೇನಿಯಸ್ ಆಗಿ ಮಾತಾಡುತ್ತಿದ್ದರು. ಜನರನ್ನು ಆಕರ್ಷಣೆ ಮಾಡುತ್ತಿದ್ದರು. ಅವರದ್ದು ಸದಾ ನಗುಮುಖ, ನೋಡುವುದಕ್ಕೂ ಎತ್ತರವಾದ ಆಳು, ಒಳ್ಳೆಯ ಬಣ್ಣ ಇತ್ತು. ಮಾತಿನಲ್ಲಿ ಹಾಸ್ಯ ಪ್ರವೃತ್ತಿಯೂ ಇತ್ತು. ಅನಂತಕುಮಾರರು ಕಾರ್ಯಕರ್ತರ ಹೆಸರನ್ನು ಜ್ಞಾಪಕ ಇಟ್ಟುಕೊಂಡು ಹೇಳುತ್ತಿದ್ದರು. ಅವರು ಕಾರ್ಯಕರ್ತರ ಹೆಗಲ ಮೇಲೆ ಕೈ ಹಾಕಿ ಮಾತನಾಡಿಸುತ್ತಿದ್ದರು. ಹೋಟೆಲಿಗೆ ಹೋಗಬೇಕಾದರೆ ಒಬ್ಬೊಬ್ಬರೇ ಹೋಗುತ್ತಿರಲಿಲ್ಲ. ಕಾರ್ಯಕರ್ತರು ಜೊತೆಗಿರಲೇಬೇಕು. ಕಾರ್ಯಕರ್ತರ ನಡೆ-ನುಡಿಯನ್ನು ಗುರುತಿಸುತ್ತಿದ್ದರು. ಸಮಯ ಬಂದರೆ ಕಾರ್ಯಕರ್ತರ ಆರೈಕೆಯನ್ನೂ ಮಾಡುತ್ತಿದ್ದರು. ಅನಂತಕುಮಾರರು ನಂಬಿಕೊಂಡವರನ್ನು ಯಾವತ್ತೂ ಕೈ ಬಿಟ್ಟವರಲ್ಲ. ಎಲ್ಲ ಜನಾಂಗದವರು ಅನಂತಕುಮಾರರ ನಾಯಕತ್ವವನ್ನು ಒಪ್ಪಿಕೊಳ್ಳುತ್ತಿದ್ದರು. ಅದೇನೋ, ಒಂದು ಆಕರ್ಷಣೆ, ಶಕ್ತಿ ಅವರಲ್ಲಿತ್ತು. ಅನಂತಕುಮಾರರು ಲಾಲ್‌ಕೃಷ್ಣ ಅದ್ವಾನಿಯವರ ಪಟ್ಟಶಿಷ್ಯರಾಗಿದ್ದರು. ಅದ್ವಾನಿಯವರನ್ನು ಅನಂತಕುಮಾರರು ದೇವರ ಸ್ಥಾನದಲ್ಲಿಟ್ಟು ನೋಡುತ್ತಿದ್ದರು. ಅದ್ವಾನಿಯವರು ಸಹ ಅನಂತಕುಮಾರರನ್ನು ದತ್ತುಪುತ್ರ ಎಂಬಂತೆ ಅಚ್ಚುಮೆಚ್ಚಿನಿಂದ ನೋಡುತ್ತಿದ್ದರು. ನನಗೂ ಅನಂತಕುಮಾರರಿಗೂ ವಯಸ್ಸಿನ ಅಂತರವಿತ್ತು. ಅವರು ನನ್ನನ್ನು ಪದ್ದಣ್ಣ ಎಂದೇ ಗೌರವದಿಂದ ಕರೆಯುತ್ತಿದ್ದರು. ನಾವೆಲ್ಲರೂ ಸಂಘದ ಕಾರ್ಯಕ್ರಮಗಳಿಗೆ ಗಣವೇಷದಲ್ಲೇ ಹೋಗುತ್ತಿದ್ದೆವು. ಆದರೆ ನಾವು ಯಾತ್ರೆಗೆ ಹೊರಡುವ ಸಂದರ್ಭದಲ್ಲಿ ಅವರು ಹಾಕುವ ಬಗಲ ಚೀಲದಲ್ಲಿ ಒಂದು ಪಂಚೆ, ಒಳ ಉಡುಪು ಮತ್ತು ಬನಿಯನ್ ಮತ್ತು ಒಂದು ಟವಲ್, ಇಷ್ಟೇ ಇರುತ್ತಿತ್ತು. ಅದೇ ಜೋಳಿಗೆಯನ್ನು ಅವರು ಅನೇಕ ವರ್ಷಗಳ ತನಕ ಬಳಸಿದ್ದರು. ಅದರಲ್ಲಿ ಕಂಬಳಿಯ ರೀತಿಯ ಒಂದು ಶಾಲು ಇರುತ್ತಿತ್ತು, ದುಡ್ಡು ಎಂದೆಂದೂ ಇರುತ್ತಿರಲಿಲ್ಲ.

ಕರ್ನಾಟಕ ರಾಜ್ಯದಲ್ಲಿ ಬಿಜೆಪಿಯ ಬೆಳವಣಿಗೆಯಲ್ಲಿ ಅನಂತಕುಮಾರರ ಪಾತ್ರ ಬಹಳ ದೊಡ್ಡದು. ಆದರೆ, ರಾಜ್ಯದಲ್ಲಿ ಅನಂತಕುಮಾರರ ವ್ಯಕ್ತಿತ್ವದ ಅನಾವರಣ ಸರಿಯಾಗಿ ಆಗಲಿಲ್ಲವೆಂಬುದು ನೋವಿನ ಸಂಗತಿ. ಇದು ಬಹಳ ದೊಡ್ಡ ಹೊಡೆತ. ಏಕೆಂದರೆ, ತತ್ತ್ವ-ಸಿದ್ಧಾಂತಸಹಿತ ಹೋರಾಟ, ರಾಜಕೀಯ ನಡಿಗೆ, ಆಡಳಿತದಲ್ಲಿ ಪ್ರಾಮಾಣಿಕತೆ ತೋರಿಸಿದ ಅಪರೂಪದ ರಾಜಕಾರಣಿ, ಅನಂತಕುಮಾರ್. ರಾಜಕೀಯವಾದ ಪೂರ್ಣ ವ್ಯಕ್ತಿತ್ವವನ್ನು ಅನಂತಕುಮಾರರಲ್ಲಿ ಕಾಣಬಹುದಿತ್ತು. ಇಂತಹ ವ್ಯಕ್ತಿಗಳು ಇವತ್ತಿನ ರಾಜಕಾರಣದಲ್ಲಿ ಬಹಳ ಕಮ್ಮಿ.

ಕರ್ನಾಟಕ ರಾಜ್ಯದಲ್ಲಿ ಬಹಳ ಚಿಕ್ಕ ವಯಸ್ಸಿನಲ್ಲಿ ಬಹಳ ದೊಡ್ಡ ಸಾಧನೆ ಮಾಡಿದ ರಾಜಕೀಯ ನಾಯಕರೆಂದರೆ ಗೋಪಾಲಗೌಡರು ಮತ್ತು ಅನಂತಕುಮಾರರು. ಗೋಪಾಲಗೌಡರು ರಾಜ್ಯದಲ್ಲಷ್ಟೇ ಹೋರಾಟಗಳಲ್ಲಿ ಜನಸಾಮಾನ್ಯರ ಜೊತೆ ಬೆರೆಯುತ್ತಿದ್ದರು. ಆದರೆ, ಅನಂತಕುಮಾರರು ರಾಜ್ಯ ಮತ್ತು ರಾಷ್ಟ್ರ ಹೀಗೆ ಎರಡೂ ಕಡೆ ಮಿಂಚಿ ಬಹಳ ಬೇಗ ಮರೆಯಾದಂತಹ ವ್ಯಕ್ತಿ. ಕರ್ನಾಟಕ ರಾಜ್ಯಕ್ಕೆ ಇದೊಂದು ದೊಡ್ಡ ದುರಂತ.

## ನಿತ್ಯ ಅನ್ನದಾನವೆಂಬ ನಿರಂತರ ಸೇವಾಕಾರ್ಯ


| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಅಕ್ಟೋಬರ್ ತಿಂಗಳಲ್ಲಿ ವಿತರಣೆಯಾದ ಊಟ | ಇಂದಿನ ವರೆಗೆ ವಿತರಣೆಯಾದ ಒಟ್ಟು ಊಟ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ: ಮಧ್ಯಾಹ್ನ 2.00 ರಿಂದ 3.00 | 4,650 | 1,65,750 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ, ಜೈನ್ ಟೆಂಪಲ್ ಮುಂಭಾಗ: ಮಧ್ಯಾಹ್ನ 12.30 ರಿಂದ 1.30 | 3,100 | 1,08,600 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ: ಮಧ್ಯಾಹ್ನ 12.30 ರಿಂದ 1.30 | 3,100 | 89,800 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ : ಮಧ್ಯಾಹ್ನ 12.30 ರಿಂದ 1.30 | 4,650 | 46,200 |
| 5 | ಅನಂತ ಪ್ರೇರಣಾ ಕೇಂದ್ರ ಸೌತ್ ಎಂಡ್ ವೃತ್ತ: ಮಧ್ಯಾಹ್ನ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 260 | 19,340 |
| | **ಒಟ್ಟು ಅಂದಾಜು** | **15,960** | **4,29,690** |





# ಕಿತ್ತಳೆ ಹಣ್ಣು

**ಸಸ್ಯಲೋಕ ಪರಿಚಯ ಮಾಲಿಕೆ- 26**



'ಕಿತ್ತಳೆ' ಎಂದಾಕ್ಷಣ ನೆನಪಾಗುವುದು ಹಚ್ಚ ಹಸಿರಿನಿಂದ ಕಂಗೊಳಿಸುವ ಕೊಡಗಿನ ಏರಿಳಿತಗಳ ಭೂ ಪ್ರದೇಶ. 'ಕೊಡಗಿನ ಕಿತ್ತಳೆ' ಎಂದೇ ಪ್ರಸಿದ್ಧಿ. ರುಚಿ, ಗಾತ್ರ, ಪರಿಮಳ ಹಾಗೂ ಬಣ್ಣದ ಮೂಲಕ ಗ್ರಾಹಕರನ್ನು ಸೆಳೆಯುವ ಕಿತ್ತಳೆ ಎರಡೂ ಅಂಗೈಗಳನ್ನು ಸೇರಿಸಿ ಹಿಡಿಯುವಷ್ಟು ಗಾತ್ರದಲ್ಲಿ ದೊಡ್ಡವಾಗಿರುತ್ತಿದ್ದವು. ಕಾಫಿ ತೋಟದ ನಡುವೆ ಅಂತರ ಬೆಳೆಯಾಗಿ ಬೆಳೆಯಲಾಗುತ್ತಿತ್ತು. ಆದರೆ, ಕಳೆದ ಎರಡು ದಶಕಗಳಿಂದ ಕಿತ್ತಳೆಗಳು ಗಾತ್ರದಲ್ಲಿ ಚಿಕ್ಕದಾಗಿವೆ. ಈ ಮೊದಲಿನ ರುಚಿಯೂ ಇಲ್ಲ. ಕಿತ್ತಳೆಗೆ ತಗುಲುವ ರೋಗ, ಕೃಷಿಕರ ನಿರಾಸಕ್ತಿ ಮತ್ತಿತರ ಕಾರಣಗಳಿಂದ ಕಿತ್ತಳೆಯ ಕೃಷಿ ಕಡಿಮೆಯಾಗಿದೆ.

ಕಿತ್ತಳೆಯ ಸಸ್ಯಶಾಸ್ತ್ರೀಯ ಹೆಸರು ಸಿಟ್ರಸ್ ಆರೇಂಟಿಯಂ. ಕಿತ್ತಳೆಯನ್ನು ಕರ್ನಾಟಕದ ಚಿಕ್ಕಮಗಳೂರು, ಹಾಸನ ಪ್ರದೇಶಗಳಲ್ಲೂ ಬೆಳೆಯಲಾಗುತ್ತದೆ. ಭಾರತದಲ್ಲಿ ಪಂಜಾಬ್, ಗುಜರಾತ್, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲೂ ಕಿತ್ತಳೆ ಬೇಸಾಯವಿದೆ.

**ಕಿತ್ತಳೆಯ ಬಗೆಗಳು :** ಕಿತ್ತಳೆಯಲ್ಲಿ ನೂರಕ್ಕೂ ಹೆಚ್ಚು ಬಗೆಗಳಿವೆ. ಭಾರತದ ನಾಗಪುರಿ, ಕೊಡಗು, ಉನ್ನು ಮತ್ತು ಕುನ್ನು ಬಗೆಗಳು ಮುಖ್ಯವಾದುವು. ಕೊಡಗಿನ ಕಿತ್ತಳೆ ನಾಗಪುರಿ ಬಗೆಗಿಂತ ಹೆಚ್ಚು ರುಚಿಯುಳ್ಳದ್ದು. ಉನ್ನು ಮತ್ತ ಕುನ್ನು ಬಗೆಗಳು ಪರದೇಶದಿಂದ ಬಂದಿರುವ ಮಿಶ್ರ ಜಾತಿಯವು; ಇವು ಕಿತ್ತಳೆರಸದ ಉತ್ಪಾದನೆಗೆ ಮಾತ್ರ ಉಪಯುಕ್ತವಾಗಿವೆ. ಇವುಗಳಲ್ಲಿ ಬೀಜಗಳಿರುವುದಿಲ್ಲ.

**ಬೇಸಾಯ, ಇಳುವರಿ:** ಕಿತ್ತಳೆ ಬೇಸಾಯಕ್ಕೆ ತಂಪಾದ ಹವೆ ಸೂಕ್ತ. 40"-100" ಮಳೆ ಬೀಳುವ ಮತ್ತು ಸಮುದ್ರಮಟ್ಟದಿಂದ 2,000 ಅಡಿ ಎತ್ತರವಿರುವ ಪ್ರದೇಶಗಳಲ್ಲಿ ಬೆಳೆಸಬಹುದು.

ಕಣ್ಣುಹಾಕಿದ ಸಸ್ಯ ನೆಟ್ಟ 4 ವರ್ಷಗಳ ನಂತರ ಹಾಗೂ ಬೀಜಗಳಿಂದ ಬೆಳೆಸಿದ ಸಸ್ಯಗಳು 9 ವರ್ಷದ ನಂತರ ಫಲಕೊಡಲು ಪ್ರಾರಂಭಿಸುತ್ತವೆ. ವರ್ಷಕ್ಕೆ ಒಂದು ಗಿಡದಿಂದ 1,000 ಹಣ್ಣುಗಳನ್ನು ಪಡೆಯಬಹುದು. ಒಂದು ಕಿತ್ತಳೆ ಗಿಡವು ಸುಮಾರು 40 ವರ್ಷಗಳ ಕಾಲ ಹಣ್ಣುಗಳನ್ನು ನೀಡುತ್ತದೆ. ಗಿಡದ ಮೇಲೆಯೇ ಹಣ್ಣುಗಳನ್ನು ಮಾಗಲು ಬಿಟ್ಟರೆ ಸಕ್ಕರೆಯ ಅಂಶವೂ ಹೆಚ್ಚಾಗುತ್ತದೆ.

**ಉಪಯುಕ್ತತೆ** : ಸ್ವಲ್ಪ ಹುಳಿ ಮಿಶ್ರಿತ ಸಿಹಿಯಾದ ಹಣ್ಣು ಕಿತ್ತಳೆ. ವಿಟಮಿನ್ ಎ, ಸಿ, ಪೊಟ್ಯಾಶಿಯಂ ಪೋಷಕಾಂಶಗಳು ಹೆಚ್ಚು. ಕಿತ್ತಳೆಯ ಸೇವನೆಯು ಕಣ್ಣಿನ ಆರೋಗ್ಯ ಹೆಚ್ಚಿಸುತ್ತದೆ; ಹೃದಯಾಘಾತ, ರಕ್ತದೊತ್ತಡ, ಮಲಬದ್ಧತೆ ತಡೆಯುತ್ತದೆ; ಹಸಿವನ್ನು ನಿಯಂತ್ರಿಸುತ್ತದೆ. ಫೋಲಿಕ್ ಹಾಗೂ ಫೋಲೇಟ್ ಆಮ್ಲದ ಅಂಶ ಇರುವುದರಿಂದ ಮೆದುಳಿನ ಬೆಳವಣಿಗೆಗೆ ಸಹಕಾರಿ, ದೇಹದ ಕೊಬ್ಬು ನಿಯಂತ್ರಣವೂ, ಉರಿಯೂತದಂಥ ಸಮಸ್ಯೆಗಳು ಕಡಿಮೆ ಯಾಗುತ್ತವೆ. ಕಿಡ್ನಿಯಲ್ಲಿರುವ ಕಲ್ಲುಗಳು ಕರಗುತ್ತವೆ. ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.



**ಛಾಯಾ ಓಕ್ ಬಾಪಟ್**

ಪುಟ 6 ರಿಂದ

# ಸಹಕಾರದ ಮೂಲಕ ಸಮೃದ್ಧಿ

ಉಂಟಾಗುತ್ತದೆ. ನಮ್ಮ ಊರಿಗೆ ಬರುವ ಒಂದೊಂದು ರೂಪಾಯಿಯನ್ನೂ ನಾವು ಊರಿನ ಹಿತಕ್ಕಾಗಿ ಬಳಸುತ್ತೇವೆ. ನಮ್ಮ ಊರಿನ ಜನರಲ್ಲಿರುವ ಜಾಗೃತಿ, ಸಹಕಾರ ಮನೋಭಾವ ಇತರ ಊರುಗಳಿಗೆ ಆದರ್ಶವಾಗಬೇಕು. ಜನರು ಪಾತ್ರೆ, ತೊಳೆದ ನೀರನ್ನು ತಿಳಿಗೊಳಿಸಿ ಕೃಷಿ ಉದ್ದೇಶಗಳಿಗಾಗಿ ಬಳಸುತ್ತಿದ್ದಾರೆ. ಈ ಉದ್ದೇಶಕ್ಕೆ ಗ್ರಾಮಪಂಚಾಯಿತಿಗಳಿಗೆ ಲಭ್ಯವಿರುವ ೧೩ ಲಕ್ಷ ರೂಪಾಯಿಗಳಲ್ಲಿ ಒಂದು ರೂಪಾಯಿಯೂ ಅಪವ್ಯಯವಾಗದಂತೆ ಉತ್ತಮವಾದ ವ್ಯವಸ್ಥೆಯನ್ನು ನಾವು ಮಾಡಿಕೊಂಡಿದ್ದೇವೆ.

ಪರಿವರ್ತನೆ ನಮ್ಮಿಂದಲೇ ಪ್ರಾರಂಭವಾಗಬೇಕು. ನಮ್ಮೂರಿನ ಶಾಲೆಗೆ ಉತ್ತಮವಾದ ಶೌಚಾಲಯ ನಿರ್ಮಿಸಿದ್ದೇವೆ. ಸಾರ್ವಜನಿಕರಿಂದ ಉದಾರ ದೇಣಿಗೆಯನ್ನೂ ಸಂಗ್ರಹಿಸಿದ್ದೇವೆ. ಶಾಲೆಯ ಎಲ್ಲ ಕೆಲಸಗಳನ್ನೂ ಊರಿನ ಜನರೇ ನಿರ್ವಹಿಸಿದ್ದಾರೆ. ಕೀರ್ತಿಶೇಷ ಸಿದ್ದೇಶ್ವರ ಸ್ವಾಮೀಜಿಯವರು ಕೂಡ ನಮ್ಮ ಕೆಲಸವನ್ನು ಮೆಚ್ಚಿಕೊಂಡಿದ್ದರು. ಶಾಲೆಗಳಲ್ಲಿ ಶಿಸ್ತುಪಾಲನೆ ಮುಖ್ಯ. ಮಕ್ಕಳಲ್ಲಿ ಶಿಸ್ತು ಅಭ್ಯಾಸವಾಗಲು ಗ್ರಾಮದ ಜನರು, ಪಂಚಾಯಿತಿ ಸದಸ್ಯರು ತಾವು ಮೊದಲು ಶಿಸ್ತುಪಾಲನೆ ಮಾಡಬೇಕು. ಇಲ್ಲಿಯೂ ರಾಜಕಾರಣ ಸಲ್ಲದು. ಸರಕಾರಿ ಶಾಲೆಗಳು ಚೆನ್ನಾಗಿ ನಡೆದರೆ ಇಡೀ ಹಳ್ಳಿಯ ಏಳಿಗೆಯಾಗುತ್ತದೆ.

ನಮ್ಮ ಹೊಲಗಳಿಗೆ ರಸ್ತೆ ಮಾಡಿಕೊಳ್ಳುವ ಉದ್ದೇಶವನ್ನು ಪ್ರಸ್ತಾಪಿಸಿದಾಗ ಯಾರೋ ಒಬ್ಬರು ಜೆಸಿಬಿ ಕೊಟ್ಟರು. ಅನೇಕರು ತಮ್ಮ ಜಮೀನನ್ನು ಬಿಟ್ಟುಕೊಟ್ಟರು. ಇನ್ನು ಕೆಲವರು ಶ್ರಮದಾನ ಮಾಡಿದರು. ನಮ್ಮ ಕೆಲಸವನ್ನು ನೋಡಿ ಇಷ್ಟವಿಲ್ಲದವರೂ ಕೈಜೋಡಿಸಿದರು. ಈ ರೀತಿಯ ಸಹಕಾರ ತತ್ತ್ವವನ್ನು ಅಳವಡಿಸಿಕೊಂಡರೆ ಊರು ಸುಂದರವಾಗುತ್ತದೆ. ಊರಿನ ಹೆಬ್ಬಾಗಿಲ ಮೇಲೆ ಕೂಡಿ ಬಾಳಿದರೆ ಸ್ವರ್ಗಸುಖ ಎಂದು ಬರೆದರೆ ಸಾಲದು. ಅದು ನಮ್ಮ ಎದೆಯಾಳಕ್ಕೂ ಇಳಿಯಬೇಕು.

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳು |
|---|---|---|---|
| 407<br>16/10/23 | ಬೆಂಗಳೂರು ವಿ.ವಿ. ಎನ್. ಜಿ. ಇ. ಎಫ್. ಲೇಔಟ್ ಬಯೋ ಪಾರ್ಕ್ | ಅದಮ್ಯ ಚೇತನ ಸಂಸ್ಥೆಯ ಸ್ವಯಂ ಸೇವಕರು, ಸೊಸೈಟಿ ಜನರಾಲ್, ಯೂಥ್ ಫಾರ್ ಸೇವಾ, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಹಸಿರು ಯೋಧರು ಹಾಗೂ ಸ್ಥಳೀಯರು. | 10 ಗಿಡಗಳು |
| 408<br>23/10/23 | ಬೆಂಗಳೂರಿನ ಕ್ಲಾಸಿಕ್ ಬಡಾವಣೆ ಪಾರ್ಕ್ ನಂ.4, ಕೆಂಬತ್ತಳ್ಳಿ, ಅಂಜನಾಪುರ-ಕೊತ್ತನೂರು ರಸ್ತೆ | ಅದಮ್ಯ ಚೇತನ ಸಂಸ್ಥೆಯ ಸ್ವಯಂ ಸೇವಕರು, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಸ್ಥಳೀಯರು. | 60 ಗಿಡಗಳು |
| 409<br>29/10/23 | ಬೆಂಗಳೂರಿನ 4ನೇ ಬ್ಲಾಕ್ ನ 32ನೇ 'ಸಿ' ಕ್ರಾಸ್- ಶ್ರೀ ಕೃಷ್ಣ ಸೇವಾಶ್ರಮ | ಅದಮ್ಯ ಚೇತನ ಸಂಸ್ಥೆಯ ಸ್ವಯಂ ಸೇವಕರು, ಯುತ್ ಫಾರ್ ಸೇವಾ, ಬಿಎಂಎಸ್ ಕಾಲೇಜು ಹಾಗೂ ಕ್ರೈಸ್ತ ಕಾಲೇಜು ವಿದ್ಯಾರ್ಥಿಗಳು, ಸ್ವಯಂ ಸೇವಕರು. | 15 ಗಿಡಗಳು |
| 410<br>06/11/23 | ಬೆಂಗಳೂರು ವಿ.ವಿ, ಎನ್. ಜಿ. ಇ. ಎಫ್. ಬಡಾವಣೆಯ ಬಯೋ ಪಾರ್ಕ್ | ಕಲ್ಪವೃಕ್ಷ ಚಾರಿಟೇಬಲ್ ಸಂಸ್ಥೆಯ ಮಕ್ಕಳು, ಸೊಸೈಟಿ ಜನರಲ್, ಯೂಥ್ ಫಾರ್ ಸೇವಾ, ಬಿಎಂಎಸ್ ಕಾಲೇಜು, ಕ್ರೈಸ್ಟ್ ಕಾಲೇಜಿನ ವಿದ್ಯಾರ್ಥಿಗಳು, ಹಾಗೂ ಅದಮ್ಯ ಚೇತನ ಸಂಸ್ಥೆಯ ಸ್ವಯಂ ಸೇವಕರು | 10 ಗಿಡಗಳು |
| 411<br>12/11/23 | ಬೆಂಗಳೂರಿನ ಅಂಜನಾಪುರ-ಆವಲಹಳ್ಳಿ ಕೆರೆ ದಡ. | ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಯೂತ್ ಫಾರ್ ಸೇವಾ, ಗ್ರೀನ್ ವಾಲೆಂಟಿಯರ್ಸ್ ಸಂಸ್ಥೆಯ ಸದಸ್ಯರು ಹಾಗೂ ಸ್ಥಳೀಯರು. | 50 ಗಿಡಗಳು |

## ವ್ಯಕ್ತಿ ವಿಶೇಷ ಮಾಲಿಕೆ

# ಮಾದರಿ ಮೈಸೂರು ನಿರ್ಮಾತೃ- ನಾಲ್ವಡಿ ಕೃಷ್ಣರಾಜ ಒಡೆಯರ್



ದಕ್ಷಿಣದ ಉದಕ ಮಂಡಲದಿಂದ ಉತ್ತರದ ತುಂಗಭದ್ರಾ ನದಿಯವರೆಗೆ, ಪಶ್ಚಿಮ ಘಟ್ಟದಿಂದ ಪೂರ್ವದ ಅನಂತಪುರದ ಪೆನುಕೊಂಡೆಯವರೆಗೆ ವಿಸ್ತರಿಸಿದ್ದ ಮೈಸೂರು ಸಂಸ್ಥಾನವು ಸ್ವಾತಂತ್ರ್ಯಪೂರ್ವದಲ್ಲಿದ್ದ ರಾಜಪ್ರಭುತ್ವದ ಅತಿದೊಡ್ಡ ಸಂಸ್ಥಾನಗಳಲ್ಲಿ ಒಂದಾಗಿತ್ತು. ಜನಪ್ರಿಯತೆಯ ತುತ್ತತುದಿಯಲ್ಲಿದ್ದರೂ ಭಾರತವು ಸ್ವಾತಂತ್ರ್ಯವನ್ನು ಗಳಿಸಿದ ದಿನವೇ ಭಾರತದೊಂದಿಗೆ ವಿಲೀನದ ಒಪ್ಪಂದಕ್ಕೆ ಸಹಿಹಾಕಿದ್ದರು, ಅಂದಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್. ಅಂದು ಮೈಸೂರು 'ಮಾದರಿ ಸಂಸ್ಥಾನ' ಎಂದು ಜಗತ್ತಿನಾದ್ಯಂತ ಹೆಸರು ಮಾಡಿತ್ತು. ಅದಕ್ಕೆ ಕಾರಣವಿಲ್ಲದಿಲ್ಲ. ಸ್ವಾತಂತ್ರ್ಯಪೂರ್ವದ ನಾಲ್ಕು ದಶಕಗಳಲ್ಲಿ ಮೈಸೂರು ಅಭೂತಪೂರ್ವವಾದ ಪ್ರಗತಿಯನ್ನು ಸಾಧಿಸಿತ್ತು. ಇಂದು ನಾವು ನೋಡುತ್ತಿರುವ ಮೇಕ್ ಇನ್ ಇಂಡಿಯಾ ಅಭಿಯಾನವು ಅಂದು ಮೇಕ್ ಇನ್ ಮೈಸೂರು ಎಂಬಂತೆ ಸದ್ದಿಲ್ಲದೆ ನಡೆದು ಹೋಯಿತು. ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ, ಆರೋಗ್ಯ, ಕೈಗಾರಿಕೆ, ವಿಜ್ಞಾನ, ಕಲೆ, ಸಾಹಿತ್ಯ, ಧಾರ್ಮಿಕ, ಕೃಷಿ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಮೈಸೂರು ಸಂಸ್ಥಾನವು ಅಭೂತಪೂರ್ವ ಸಾಧನೆಗೈದು ಜಗತ್ತಿನ ಗಮನ ಸೆಳೆದಿತ್ತು. ಇದಕ್ಕೆಲ್ಲ ಕಾರಣರಾದವರು, ಗಾಂಧೀಜಿಯವರಿಂದಲೇ 'ರಾಜರ್ಷಿ' ಎಂದು ಕರೆಯಿಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರ್.

೧೯೦೨ ರಿಂದ ೧೯೪೦ರ ವರೆಗೆ ರಾಜ್ಯಭಾರ ಮಾಡಿದ ಕೃಷ್ಣರಾಜ ಒಡೆಯರ್ ಜನಿಸಿದ್ದು ಜೂನ್ ೪, ೧೮೮೪ರಂದು. ಹತ್ತುವರ್ಷಕ್ಕೇ ಅವರ ಪಟ್ಟಾಭಿಷೇಕವಾಗಿದ್ದರೂ ರಾಜ್ಯದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡದ್ದು ದಿನಾಂಕ ಆಗಸ್ಟ್ ೮, ೧೯೦೨ರಂದು. ಶ್ರೀ ಪಿ ರಾಘವೇಂದ್ರ ರಾವ್ ಅವರಿಂದ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಶ್ ಭಾಷೆಗಳಲ್ಲಿ ಆರಂಭಿಕ ಶಿಕ್ಷಣ ಪಡೆದ ಒಡೆಯರ್ ಮುಂದೆ ಬಾಂಬೇ ನಾಗರಿಕ ಸೇವೆಯ ಸರ್ ಸ್ಟೂವರ್ಟ್ ಫ್ರೇಸರ್ ಅವರಿಂದ ಆಡಳಿತದ ಸೂಕ್ಷ್ಮಗಳನ್ನು ಕಲಿತುಕೊಂಡರು. ಕುದುರೆ ಸವಾರಿ, ಭಾರತೀಯ ಮತ್ತು ಪಾಶ್ಚಿಮಾತ್ಯ ಸಂಗೀತವನ್ನೂ ಕಲಿತ ಅವರು ಪಟ್ಟಾಭಿಷಿಕ್ತರಾಗುವ ಮೊದಲೇ ತಮ್ಮ ರಾಜ್ಯದ ಭೌಗೋಳಿಕ ಮತ್ತು ಸಾಮಾಜಿಕ ಸ್ಥಿತಿಗಳ ಅಧ್ಯಯನವನ್ನು ಮಾಡಿದ್ದರು. ಹೀಗಾಗಿ, ಅವರ ಮುಂದಿನ ಪ್ರತಿಯೊಂದು ನಡೆಯೂ ಜನಪರವಾಗಿದ್ದುದರಲ್ಲಿ ಆಶ್ಚರ್ಯವಿಲ್ಲ.

ತಮ್ಮ ಯಶಸ್ಸಿಗೆ ಅವರು ದಕ್ಷರಾದ ದಿವಾನರನ್ನು ನೇಮಿಸಿಕೊಂಡದ್ದೇ ಮುಖ್ಯ ಕಾರಣ. ಕೃಷ್ಣಮೂರ್ತಿ, ಮಾಧವರಾವ್, ಆನಂದರಾವ್, ಸರ್ ಎಂ. ವಿಶ್ವೇಶ್ವರಯ್ಯ, ಕಾಂತರಾಜೇ ಅರಸ್ ಮತ್ತು ಮಿರ್ಜಾ ಇಸ್ಮಾಯಿಲ್ ರಂತಹ ದಕ್ಷ ದಿವಾನರ ರಾಜನಿಷ್ಠೆ, ದೂರದರ್ಶಿತ್ವಗಳು ರಾಜ್ಯದ ಪ್ರಗತಿಗೆ ಕಾರಣವಾದವು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದ ಸಾಧನೆಗಳನ್ನು ಪಟ್ಟಿಮಾಡಿದರೆ, 'ರಾಜರ ಕಾಲವೇ ಚೆನ್ನಾಗಿತ್ತು' ಎಂಬ ಹಿರಿಯರ ಉದ್ಗಾರದ ಅರ್ಥ ಹೊಳೆಯುತ್ತದೆ.

ಇಂಧನ ಉತ್ಪಾದನೆಗಾಗಿ ಶಿವನ ಸಮುದ್ರದಲ್ಲಿ ಜಲವಿದ್ಯುತ್ ಸ್ಥಾವರ, ಏಷ್ಯಾದಲ್ಲಿಯೇ ಮೊದಲ ಬಾರಿಗೆ ಬೆಂಗಳೂರು ನಗರಕ್ಕೆ ವಿದ್ಯುತ್ ಬೀದಿ ದೀಪ ವ್ಯವಸ್ಥೆ, ಕೋಲಾರ ಚಿನ್ನದ ಗಣಿಗೆ ವಿದ್ಯುತ್ ಸರಬರಾಜು, ನೀರಾವರಿಗಾಗಿ ವಾಣಿವಿಲಾಸ ಸಾಗರ ಅಣೆಕಟ್ಟು, ಕೃಷ್ಣರಾಜಸಾಗರ ಅಣೆಕಟ್ಟು, ಮಾರ್ಕೋನಹಳ್ಳಿ ಅಣೆಕಟ್ಟು, ಶರಾವತಿ ನದಿಗೆ ಹಿರೇಭಾಸ್ಕರ ಅಣೆಕಟ್ಟು, ಆರೋಗ್ಯ ಕ್ಷೇತ್ರದಲ್ಲಿ ಮಿಂಟೋ ಕಣ್ಣಿನ ಆಸ್ಪತ್ರೆ, ಮಾನಸಿಕ ಆರೋಗ್ಯ ಕೇಂದ್ರ ಬೆಂಗಳೂರು, ಮೈಸೂರಿನ ಕೆ ಆರ್ ಆಸ್ಪತ್ರೆ, ವಾಣಿವಿಲಾಸ ಆಸ್ಪತ್ರೆ, ಬೆಂಗಳೂರು ಮೊದಲಾದ ನಗರಗಳಲ್ಲಿ ೨೭೦ ಆಸ್ಪತ್ರೆಗಳ ಸ್ಥಾಪನೆ ಮತ್ತು ಜನರಿಗೆ ಉಚಿತ ಚಿಕಿತ್ಸೆ, ವಿಜ್ಞಾನದ ಬೆಳವಣಿಗೆಗಾಗಿ ಭಾರತೀಯ ವಿಜ್ಞಾನ ಸಂಸ್ಥೆಯ ಸ್ಥಾಪನೆ, ರಾಮನ್ ರಿಸರ್ಚ್ ಸಂಸ್ಥೆಗೆ ೧೦ ಎಕರೆ ಸ್ಥಳದಾನ, ಆಡಳಿತದ ಸುಧಾರಣೆಗಾಗಿ ಮೈಸೂರು ಪ್ರಜಾ ಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆ, ಮೈಸೂರು ಬಾಯ್ಸ್ ಸ್ಕೌಟ್, ಮೈಸೂರು ಸಾಮಾಜಿಕ ಅಭಿವೃದ್ಧಿ ಸಂಸ್ಥೆ, ಮಹಿಳೆಯರಿಗೆ ಮತದಾನದ ಹಕ್ಕು ಹಿಂದುಳಿದ ವರ್ಗಗಳ ಆಯೋಗ, ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಪ್ರಾರಂಭ, ಅರ್ಥವ್ಯವಸ್ಥೆಯ ನಿರ್ವಹಣೆಗಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಭೂಮಿ ಅಡಮಾನ ಬ್ಯಾಂಕ್, ಮೈಸೂರು ಛೇಂಬರ್ ಆಫ್ ಕಾಮರ್ಸ್, ಸಹಕಾರ ಸಂಘಗಳು, ಮೈಸೂರು ರೈಲ್ವೇಸ್ (೨೩೨ ಮೈಲು ಮಾರ್ಗದೊಂದಿಗೆ ಪ್ರಾರಂಭವಾಗಿತ್ತು), ಶಿಕ್ಷಣಕ್ಕಾಗಿ ಮೈಸೂರು ಕೃಷಿ ವಸತಿ ಶಾಲೆ, ಮೈಸೂರು ವಿಶ್ವವಿದ್ಯಾನಿಲಯ, ಯುವರಾಜಾ ಕಾಲೇಜು, ಬೆಂಗಳೂರಿನ ಇಂಜನಿಯರಿಂಗ್ ಕಾಲೇಜು, ಮಹಾರಾಣಿ ಮಹಿಳೆಯರ ವಿಜ್ಞಾನ ಕಾಲೇಜು, ಮೈಸೂರು ಸರಕಾರಿ ವಿಜ್ಞಾನ ಕಾಲೇಜು, ಬೆಂಗಳೂರು ಮತ್ತು ಮೈಸೂರು ಮೆಡಿಕಲ್ ಕಾಲೇಜು, ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಲು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬೆಂಗಳೂರು ಮುದ್ರಣ ಮತ್ತು ಪ್ರಕಾಶನ ಸಂಸ್ಥೆಗಳ ಸ್ಥಾಪನೆ, ಕೈಗಾರಿಕಾ ಕ್ಷೇತ್ರದಲ್ಲಿ ಮೈಸೂರು ಗಂಧದೆಣ್ಣೆ ಕಾರ್ಖಾನೆ, ವುಡ್ ಡಿಸ್ಟಿಲೇಶನ್ ಕಾರ್ಖಾನೆ, ಭದ್ರಾವತಿ, ಮೈಸೂರು ಕ್ರೋಮ್ ಮತ್ತು ಟ್ಯಾನಿಂಗ್ ಫ್ಯಾಕ್ಟರಿ, ಮೈಸೂರು ಐಯರ್ನ್ ವರ್ಕ್ಸ್, ಭದ್ರಾವತಿ, ಖಾದಿ ಸಹಕಾರ ಸಂಘ, ಕೃಷ್ಣರಾಜೇಂದ್ರ ಮಾರುಕಟ್ಟೆ, ಮೈಸೂರು ಸಕ್ಕರೆ ಕಾರ್ಖಾನೆ, ಮಂಡ್ಯ, ಕೆ ಆರ್ ಮಿಲ್ಸ್, ಮೈಸೂರು, ಮೈಸೂರು ಪೇಪರ್ ಮಿಲ್ಸ್, ಭದ್ರಾವತಿ, ಮೈಸೂರು ಲ್ಯಾಂಪ್ಸ್, ಬೆಂಗಳೂರು, ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಕಾರ್ಖಾನೆ, ಬೆಳಗೊಳ, ಮೈಸೂರು ಪೇಪರ್ ಮತ್ತು ವಾರ್ನಿಷ್ ಲಿಮಿಟೆಡ್ ಕಂಪೆನಿ, ಗ್ಲಾಸ್ ಮತ್ತು ಪೋರ್ಸಲೀನ್ ಕಾರ್ಖಾನೆ (ಇಂದಿನ ಬಿಎಚ್‌ಇಎಲ್), ನಿರ್ಮಾಣ ಕ್ಷೇತ್ರದಲ್ಲಿ ಲಲಿತ ಮಹಲ್ ಅರಮನೆ, ಟೌನ್ ಹಾಲ್, ಬೆಂಗಳೂರು, ಸೈಂಟ್ ಫಿಲೋಮಿನಾಸ್ ಕೆಥಿಡ್ರಲ್, ಮೈಸೂರು ಮುಂತಾದವುಗಳು ಒಡೆಯರರ ಕೊಡುಗೆಗಳ ಪಟ್ಟಿಯ ಒಂದು ಅಂಶ ಮಾತ್ರ. ಇವೆಲ್ಲವೂ ನೂರಾರು ವರ್ಷಗಳ ನಂತರವೂ ಕನ್ನಡಿಗರ ಹೆಮ್ಮೆಯ ಸಂಸ್ಥೆಗಳಾಗಿ ಉಳಿದುಕೊಂಡಿವೆ.

ಅವರು ಸಾಹಿತ್ಯದ ಜೊತೆಗೆ ಸಂಗೀತಕ್ಕೂ ಅಷ್ಟೇ ಪ್ರಾಧಾನ್ಯ ನೀಡಿದ್ದರು. ವೀಣೆ ಶೇಷಣ್ಣ, ಪಿಟೀಲು ರಾಮಯ್ಯ, ಪಿಟೀಲು ಚೌಡಯ್ಯ, ವಾಸುದೇವಾಚಾರ್ಯ, ಎಸ್ ಕೇಶವಮೂರ್ತಿ, ಮುತ್ತಯ್ಯ ಮುಂತಾದ ಸಂಗೀತ ದಿಗ್ಗಜಗಳು ಅವರ ಆಸ್ಥಾನದ ಅಲಂಕಾರಗಳಾಗಿದ್ದರು.

ಮಹಾರಾಜರು ಅಂದಿನ ಕಾಲದಲ್ಲಿಯೇ ಪ್ರಾರಂಭಿಸಿದ ಕೆಲವು ಆಡಳಿತಾತ್ಮಕ ಉಪಕ್ರಮಗಳು ಇಂದಿಗೂ ದೇಶದಲ್ಲಿ ಅಲ್ಪಸ್ವಲ್ಪ ಸುಧಾರಣೆಗಳೊಂದಿಗೆ ಜಾರಿಯಲ್ಲಿರುವುದನ್ನು ಕಾಣಬಹುದು. ಮುನಿಸಿಪಾಲಿಟಿಗಳು ಮತ್ತು ಗ್ರಾಮ ಪಂಚಾಯಿತಿಗಳನ್ನು ಮೊತ್ತಮೊದಲ ಬಾರಿಗೆ ಪ್ರಾರಂಭಿಸಿ ಜನಸಾಮಾನ್ಯರಿಗೆ ಆಡಳಿತದಲ್ಲಿ ಪಾಲುಗೊಳ್ಳುವ ಅವಕಾಶವನ್ನು ಅವರು ಒದಗಿಸಿದರು. ಅವರ ಕಾಲದಲ್ಲಿ ನೈರ್ಮಲ್ಯ, ಆರೋಗ್ಯ, ಶಿಕ್ಷಣ, ಸಂಚಾರ, ನೀರಿನ ಪೂರೈಕೆ ಮುಂತಾದ ಕ್ಷೇತ್ರಗಳಿಗೆ ಸ್ವಾಯತ್ತತೆ ದೊರೆತಿತು.

ಒಡೆಯರರ ಕಾಲದಲ್ಲಿ ಕರ್ನಾಟಕದಲ್ಲಿ ಧಾರ್ಮಿಕ ಸಾಮರಸ್ಯವಿರಲು ಅವರ ಸರ್ವಧರ್ಮ ಸಮದೃಷ್ಟಿಯೇ ಕಾರಣ. ಹಾಗೆಂದು ಸಮಾಜಸುಧಾರಣೆಯ ಕ್ರಮಗಳನ್ನು ತೆಗೆದುಕೊಳ್ಳಲು ಅವರು ಹಿಂದೆಗೆಯಲಿಲ್ಲ. ದೇವದಾಸಿ ಪದ್ಧತಿ ನಿಷೇಧ, ಬಸವಿ ಪದ್ಧತಿ ರದ್ದತಿ, 'ಗೆಜ್ಜೆಪೂಜೆ' ಸಂಪೂರ್ಣ ನಿರ್ಮೂಲನೆ, ವೇಶ್ಯಾವೃತ್ತಿ ತಡೆಗಟ್ಟುವ ಕಾಯಿದೆ, ವಿಧವಾವಿವಾಹ ಕಾನೂನು, ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ, ಜಾತ್ಯತೀತವಾಗಿ ಶಿಕ್ಷಣದ ಅವಕಾಶ, ಮಾಧ್ಯಮಿಕ ಶಿಕ್ಷಣದವರೆಗೆ ಶುಲ್ಕ ರದ್ದತಿ, ಸಹಕಾರಿ ಕಾರ್ಮಿಕ ಪರಿಹಾರ ಕಾಯಿದೆ ಮುಂತಾದ ಅನೇಕ ಸುಧಾರಣೆಗಳನ್ನು ಅವರು ಮಾಡಿದರು. ಈ ಹಿನ್ನೆಲೆಯಲ್ಲಿ ಇತಿಹಾಸಕಾರರು ಒಡೆಯರರನ್ನು "ಸಾಮಾಜಿಕ ಕಾನೂನುಗಳ ಹರಿಕಾರ" ಎಂದು ಕರೆದದ್ದು ಸಮಂಜಸವಾಗಿಯೇ ಇದೆ.

ಬ್ರಿಟಿಷರಿಂದ "ಗ್ರ್ಯಾಂಡ್ ಕಮಾಂಡರ್ ಆಫ್ ಇಂಡಿಯನ್ ಎಂಪೈರ್" ಎಂಬ ಬಿರುದನ್ನು ಗಳಿಸಿದ ನಾಲ್ವಡಿ ಕೃಷ್ಣರಾಜ ಒಡೆಯರರು ಯದುವಂಶದ ಸಂತತಿಯ ೨೪ನೇ ರಾಜರಾಗಿದ್ದು ಆಗಸ್ಟ್ ೩, ೧೯೪೦ರಂದು ನಿಧನರಾದರು. ಪ್ರಜಾಪ್ರಭುತ್ವಕ್ಕಿಂತ ರಾಜಪ್ರಭುತ್ವವೇ ಮೇಲು ಎಂಬಷ್ಟು ಪ್ರಜೆಗಳ ಪ್ರೀತಿಯನ್ನು ಗಳಿಸಿದ ಒಡೆಯರರ ಬದುಕಿನ ಖಾಸಗಿ ವಿಷಯಗಳು ಅವರ ಸಾಧನೆಯ ಬೆಟ್ಟದೆದುರು ಗೌಣವಾಗುತ್ತವೆ.

**-ಕೆ. ಜನಾರ್ದನ ತುಂಗ**

# ಅದಮ್ಯಚೇತನ ತಿಂಗಳ ವರದಿ (15 ಅಕ್ಟೋಬರ್ 2023 ರಿಂದ 15 ನವೆಂಬರ್ 2023)




**ಪ್ರೇಕ್ಷಕರ ಮನಸೂರೆಗೊಂಡ ತಿಂಗಳ ವಿಶೇಷ ಕಾರ್ಯಕ್ರಮಗಳು:** ಅದಮ್ಯ ಚೇತನ ಸಂಸ್ಥೆ ಹಾಗೂ ಅನಂತಕುಮಾರ ಪ್ರತಿಷ್ಠಾನಗಳ ಸಂಯುಕ್ತಾಶ್ರಯದಲ್ಲಿ ಅದಮ್ಯ ಚೇತನ ಸಂಸ್ಥೆಯ ಸಭಾಂಗಣದಲ್ಲಿ 2023ರ ಅ.28 ರಂದು ನಡೆದ ತಿಂಗಳ ವಿಶೇಷ ಕಾರ್ಯಕ್ರಮಗಳು ತಮ್ಮ ವೈವಿಧ್ಯಮಯ ಸ್ವರೂಪಗಳಿಂದಾಗಿ ಪ್ರೇಕ್ಷಕರ ಮನಸೂರೆಗೊಂಡವು.

ಕರುನಾಡಿನ ದೇವಾಲಯಗಳನ್ನು ಪರಿಚಯಿಸುವ ಕಾರ್ಯಕ್ರಮದ ಅಂಗವಾಗಿ 'ದೇಗುಲ ದರ್ಶನ' ಶೀರ್ಷಿಕೆಯಡಿ ಚಿಕ್ಕಮಗಳೂರು ಜಿಲ್ಲೆಯ ಹಲವಾರು ದೇವಾಲಯಗಳ ವಿಡಿಯೋ ದೃಶ್ಯಗಳ ಜೊತೆಗೆ ಅವುಗಳ ಐತಿಹಾಸಿಕ ವಿವರಣೆಯು ನಾಡಿನ ಧಾರ್ಮಿಕ ಪರಿಸರದ ಶ್ರೀಮಂತಿಕೆಯನ್ನು ಮನದಟ್ಟು ಮಾಡಿಸುವಲ್ಲಿ ತುಂಬಾ ಪರಿಣಾಮಕಾರಿಯಾಗಿ ಮೂಡಿಬಂದಿತು.

ಸಾಂಸ್ಕೃತಿಕ, ಪರಂಪರೆ, ಕಲೆ ಹಾಗೂ ಸಂಪ್ರದಾಯವನ್ನು ಗೌರವಿಸುವ ಶ್ರೀ ಅನಂತಕುಮಾರರ ಆಶಯಗಳ ಮುಂದುವರಿಕೆಗಾಗಿ ಪ್ರತೀ ತಿಂಗಳು ಆಯೋಜಿಸುತ್ತಿರುವ ಅ-ಚಾಟ್ ಸಾಂಸ್ಕೃತಿಕ ಕಾರ್ಯಕ್ರಮದಡಿ ಬೆಂಗಳೂರಿನ ಜೆ.ಪಿ.ನಗರದ ನಟರಾಜ ನೃತ್ಯಕಲಾಮಂದಿರದ ರಶ್ಮಿ, ಗುಣಶ್ರೀ, ಬೃಹತಿ, ದಿಯಾ, ಚಿನ್ಮಯಿ, ನಿವೇದಿತಾ, ವೈಷ್ಣವಿ ಹರ್ಷಿಣಿ ಮುಂತಾದ ಕಲಾವಿದರು ಪ್ರದರ್ಶಿಸಿದ



ನೃತ್ಯರೂಪಕವು ಪ್ರೇಕ್ಷಕರನ್ನು ಮೂಕವಿಸ್ಮಿತರನ್ನಾಗಿಸಿತು. ಗಾಯನದಲ್ಲಿ ಶ್ರೀಮತಿ ರಮಾ ಜಗನ್ನಾಥ, ಮೃದಂಗದಲ್ಲಿ ಶ್ರೀ ಪುರುಷೋತ್ತಮ ಮತ್ತು ಶ್ರೀಮತಿ ಸುಭದ್ರ ಪ್ರಭು ಅವರು ನಟುವಾಂಗದಲ್ಲಿ ಸಹಕಾರ ನೀಡಿದರು. 'ಲಕ್ಷ್ಮೀ ಸ್ವಯಂವರ' ಗಮಕ ಕಾರ್ಯಕ್ರಮದಲ್ಲಿ ಶ್ರೀಮತಿ ಗೀತಾ ಪ್ರಭಾಕರ್ ಅವರ ಸುಶ್ರಾವ್ಯ ಗಾಯನಕ್ಕೆ, ಶ್ರೀಮತಿ ಜಯಲಕ್ಷ್ಮಿ ಅವರು ಪ್ರಬುದ್ಧ ವ್ಯಾಖ್ಯಾನ ನೀಡಿದರು. ಯೋಗಾಚಾರ್ಯ ಡಾ. ಎಸ್. ರಾಘವೇಂದ್ರ ಪ್ರಸಾದ್ ಅವರು ಯೋಗಶಿಕ್ಷಣದ ಮಹತ್ತ್ವವನ್ನು ವಿವರಿಸಿ, ಪ್ರಾತ್ಯಕ್ಷಿಕೆ ನೀಡಿದರು. ಮಾಜಿ ಸಚಿವ ಎಸ್. ಸುರೇಶಕುಮಾರರು "ಚಿಣ್ಣರ ಚೇತನ" ಗೋಡೆ ಪತ್ರಿಕೆ ಮತ್ತು ಅನಂತಪಥ ಮಾಸ ಪತ್ರಿಕೆಗಳನ್ನು ಬಿಡುಗಡೆಗೊಳಿಸಿದರು. ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟ, ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ನಿರ್ದೇಶಕ ಪ್ರದೀಪ್ ಓಕ್, 'ಅನಂತಪಥ' ಸಂಪಾದಕ ಟಿ.ಎಸ್. ಗೋಪಾಲ್ ವೇದಿಕೆಯಲ್ಲಿದ್ದರು



**ಗಣ್ಯರ ಭೇಟಿ:** ಬೆಂಗಳೂರಿನ ಸೌತ್ ಎಂಡ್ ಸರ್ಕಲ್ ನಲ್ಲಿರುವ ಅನಂತ ಪ್ರೇರಣಾ ಕೇಂದ್ರಕ್ಕೆ ಅ.30ರಂದು ಭೇಟಿ ನೀಡಿದ ಐಸಿಐಸಿಐ ಬ್ಯಾಂಕ್‌ನ ಜಯನಗರ ಶಾಖೆಯ ಹಿರಿಯ ಅಧಿಕಾರಿಗಳಾದ ಶ್ರೀ ರಾಜೇಶ್ ಹಾಗೂ ಶ್ರೀ ಬ್ರಹ್ಮಾನಂದ ಅವರು ಅನಂತಕುಮಾರರ ಬಾಲ್ಯ, ಶಿಕ್ಷಣ, ರಾಜಕೀಯ ಸಾಧನೆ ಕುರಿತು ಮಾಹಿತಿ ಪಡೆದು, ಅನಂತಕುಮಾರ್ ಕುರಿತ ಕಿರುಚಿತ್ರಗಳನ್ನು ವೀಕ್ಷಿಸಿದರು. ಅನಂತ ಪ್ರೇರಣಾ ಕೇಂದ್ರದ ಶ್ರೀ ಜಿ.ಎಂ. ಇನಾಂದಾರ್ ಉಪಸ್ಥಿತರಿದ್ದರು. ಆಕ್ಯುಪ್ರೆಶರ್ ಚಿಕಿತ್ಸಕಿ, ಶ್ರೀಮತಿ ಕಲ್ಪನಾ ಅವರು ಅ. 17ರಂದು ಅದಮ್ಯ ಚೇತನ ಸಿಬ್ಬಂದಿಗೆ ಆಕ್ಯುಪ್ರೆಶರ್ ಕುರಿತು ಮಾಹಿತಿ ಮತ್ತು ಚಿಕಿತ್ಸೆ ನೀಡಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶ್ರೀ ಬಾಲಾಜಿ, ಸಹಾಯಕ ಜಿಲ್ಲಾಧಿಕಾರಿ (ನಿವೃತ್ತ) ಚಿಕ್ಕವೆಂಕಟಪ್ಪ ಹಾಗೂ ಗುತ್ತಿಗೆದಾರ ದೇವರಾಜ್ ಅವರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು. ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪಟ್ಟಣ ನಿವಾಸಿಗಳಾದ ಪೂಜಾ ಕುಲಕರ್ಣಿ, ಪ್ರಿಯಾಂಕಾ ಕುಲಕರ್ಣಿ, ಅಕ್ಷಯ್ ಜೋಶಿ, ಅನಿರುದ್ಧ ಜೋಶಿ ಹಾಗೂ ಗವಿಪುರಂನಲ್ಲಿರುವ ಅದಮ್ಯ ಚೇತನ ಸಂಸ್ಥೆಯ ಸಿಬ್ಬಂದಿ 2023ರ ನ. 4ರಂದು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು.

**ಇತರ ಚಟುವಟಿಕೆಗಳು:** ಅದಮ್ಯ ಚೇತನ ಸಂಸ್ಥೆಯು ಭಗವದ್ಗೀತೆ ಪಠಣ, ಹಸಿರು ಭಾನುವಾರ, ಶ್ರೀ ಚೇತನ ಸಭೆ, ಶ್ರದ್ಧೆಯ ಶಿಲ್ಪ (ಆಕಾಶವಾಣಿ ಕಾರ್ಯಕ್ರಮ), ದೇಗುಲ ದರ್ಶನ, ನಿತ್ಯ ಅನ್ನದಾನ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳು ಪ್ರತೀ ವಾರಕ್ಕೊಮ್ಮೆ ನಿಗದಿತ ದಿನದಂದು ನಿರಂತರವಾಗಿ ಮುಂದುವರಿದುಕೊಂಡು ಬಂದಿವೆ.

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Venkatesh Manu**
Acknowledgements: **Poornaprajna / Beluru Sudarshana / Srikanth K**
Sketches: **Raghupathi Shringeri**
Photographs: **Gopal TS / Chakrapani Kengeri / Internet Sources / AKP / ACF**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ (ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ)



ಕರ್ನಾಟಕದ ವಿಧಾನಸಭೆ ಮಾಜಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಅ. 31ರಂದು ಸೌತ್ ಎಂಡ್ ಸರ್ಕಲ್ ಬಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು




ಅದಮ್ಯ ಚೇತನ ಸಂಸ್ಥೆಯಲ್ಲಿ 2023ರ ನವೆಂಬರ್ 1 ರಂದು ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಂದ ಕರ್ನಾಟಕದ 50ರ ಸಂಭ್ರಮದ ರಾಜ್ಯೋತ್ಸವದ ಧ್ವಜಾರೋಹಣ.



ಕಲಾಜ್ಯೋತಿ ಕಟ್ಟೆ ಸಂಘಟನೆಯು 2023ರ ನವೆಂಬರ್ 1 ರಂದು ಆಚರಿಸಿದ ಕರ್ನಾಟಕದ ಸುವರ್ಣ ರಾಜ್ಯೋತ್ಸವದ ಸಂಭ್ರಮದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಂದ ಕರ್ನಾಟಕದ ಧ್ವಜಾರೋಹಣ.



ಬೆಂಗಳೂರಿನ ಹಲಸೂರಿನ ಶ್ರೀ ಯೋಗೇಶ್ವರಾನಂದ ಶಿಕ್ಷಣ ಸಂಸ್ಥೆಯ 150 ವಿದ್ಯಾರ್ಥಿಗಳು ಹಾಗೂ 15 ಶಿಕ್ಷಕರು ಜೊತೆಗೂಡಿ, ಅ. 07ರಂದು, ಗವಿಪುರದ ಅದಮ್ಯ ಚೇತನ ಸಂಸ್ಥೆಯ 'ಅನ್ನಪೂರ್ಣ' ಅಡುಗೆ ಮನೆಗೆ ಭೇಟಿ ನೀಡಿದರು.




ಶ್ರೀ ಅನಂತ ಕುಮಾರರ ಪುಣ್ಯತಿಥಿಯ ನಿಮಿತ್ತ ಅದಮ್ಯ ಚೇತನ ಸಂಸ್ಥೆಯು 2023ರ ನ. 12ರಂದು ಅನಂತ ಸ್ಮೃತಿ ವನದಲ್ಲಿ ಅನ್ನದಾನವನ್ನು ಏರ್ಪಡಿಸಿತ್ತು



ಬೆಂಗಳೂರಿನ ಅಂಜನಾಪುರ-ಅವಲಹಳ್ಳಿ ಕೆರೆಯ ದಡದಲ್ಲಿ 411ನೇ ಹಸಿರು ಭಾನುವಾರ ಹಾಗೂ ಶ್ರೀ ಅನಂತಕುಮಾರರ ಪುಣ್ಯತಿಥಿ ನಿಮಿತ್ತ 2023ರ ನ. 12ರಂದು ಅದಮ್ಯ ಚೇತನ ಸಂಸ್ಥೆಯಿಂದ ನಾನಾ ಜಾತಿಯ 50 ಗಿಡಗಳನ್ನು ನೆಡಲಾಯಿತು.



'ಅದಮ್ಯ ಚೇತನ'ದ ಸಭಾಂಗಣದಲ್ಲಿ 2023ರ ಅಕ್ಟೋಬರ್ 28 ರಂದು ಜರುಗಿದ ಅ-ಚಾಟ್ (ಅನಂತಕುಮಾರ-ಸಂಸ್ಕೃತಿ, ಪರಂಪರೆ, ಕಲೆ ಹಾಗೂ ಸಂಪ್ರದಾಯ) ಸಮಾರಂಭದಲ್ಲಿ ಮಾಜಿ ಸಚಿವ ಎಸ್. ಸುರೇಶ ಕುಮಾರರು 'ಅನಂತಪಥ' ಮಾಸಪತ್ರಿಕೆ 40ನೇ ಸಂಚಿಕೆಯನ್ನು ಲೋಕಾರ್ಪಣೆ ಮಾಡಿದರು. ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟ, ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಪ್ರದೀಪ್ ಓಕ್, 'ಅನಂತಪಥ' ಸಂಪಾದಕ ಟಿ.ಎಸ್. ಗೋಪಾಲ್ ವೇದಿಕೆಯಲ್ಲಿದ್ದರು.

## ಅನಂತ ಚಿತ್ರಸಂಪುಟ

ಕನ್ನಡ ನಾಡು ನುಡಿಗಳ ಬಗೆಗೆ ಶ್ರೀ ಅನಂತಕುಮಾರ್ ಅವರಿಗೆ ಅಪಾರ ಅಭಿಮಾನವಿತ್ತು. ಕನ್ನಡ ಕಲಾವಿದರು ಮತ್ತು ಲೇಖಕರ ಬಗೆಗೆ ಗೌರವಪೂರ್ವಕ ವಿಶ್ವಾಸ ಹೊಂದಿದ್ದ ಅವರು ಕನ್ನಡ ಸಂಸ್ಕೃತಿ, ಪರಂಪರೆಗಳನ್ನು ಬಿಂಬಿಸುವ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು.











